## ಅಧ್ಯಾಯ 6

## ಪ್ರಜಾತಾಂತ್ರಿಕ ಪೌರತ್ವ

### ಮುನ್ನುಡಿ

ರಾಜಕೀಯ ಸಿದ್ಧಾಂತದಲ್ಲಿ ಅತ್ಯಂತ ಜನಪ್ರಿಯ ವಿಷಯಗಳ ಬಗ್ಗೆ ಯಾವುದಾದರೂ ಪಟ್ಟಿಗಳಿರುತ್ತಿದ್ದಲ್ಲಿ, ಪೌರತ್ವ ಎನ್ನುವುದು 1990ರ ಮೊದಲಿನಿಂದ ಖಂಡಿತವಾಗಿಯೂ ಆ ಪಟ್ಟಿಯ ಮೇಲ್ಪಂಕ್ತಿಯಲ್ಲಿರುತ್ತಿತ್ತು. ಇದು ಯಾವಾಗಲೂ ಜನಪ್ರಿಯವಾಗಿತ್ತು ಎಂದಲ್ಲ. 1970ರ ಕೊನೆಯಲ್ಲೇ ಈ ವಿಷಯವು "ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿದೆ" ಎಂದು ಸೂಚಿಸಲಾಗಿತ್ತು (ವಾನ್ ಗನ್‌ಸ್ಟೆರೆನ್, 1978, ಪುಟ. 9). ಹಾಗಿದ್ದಲ್ಲಿ, ಈ ಬದಲಾವಣೆಗೆ ಕಾರಣವೇನು? ಪೌರತ್ವದ ಸಿದ್ಧಾಂತ ಮತ್ತು ಪೌರತ್ವದ ಶಿಕ್ಷಣದ ಬಗ್ಗೆ ಆಸಕ್ತಿ ಹೆಚ್ಚುವುದಕ್ಕೆ ಬಹುಶಃ ಬೇರೆ ಬೇರೆ ಸನ್ನಿವೇಶಗಳಲ್ಲಿ ಉದ್ಭವಿಸಿದ ಈ ಅನೇಕ ಅಂಶಗಳು ಕಾರಣವಾಗಿರಬಹುದು: ರಾಜಕೀಯದ ಬಗ್ಗೆ ಅನಾಸಕ್ತಿ ಹೆಚ್ಚುತ್ತಿದೆ ಎನ್ನುವ ಭಾವನೆ ರಾಜಕೀಯದಲ್ಲಿ ಜನರ ಪಾಲ್ಗೊಳ್ಳುವಿಕೆ ಇಳಿಮುಖವಾಗುತ್ತಿದ್ದುದು (ಫ್ರೇಜರ್, 1999),ರಾಷ್ಟ್ರೀಯತೆಯ ಪುನರುಜ್ಜೀವನದ ಪರಿಣಾಮವಾಗಿ ಮತ್ತು ಪಶ್ಚಿಮ ಯುರೋಪಿನ ಸಮಾಜದಲ್ಲಿದ್ದ ಬಹುಸಾಂಸ್ಕೃತಿಕ ಜನಸಂಖ್ಯೆಯಿಂದಾಗಿ ಹುಟ್ಟಿದ ಆತಂಕಗಳು (ಕಿಮ್‌ಲಿಕ ಮತ್ತು ನೊರ್‌ಮ್ಯಾನ್, 1994), ಪ್ರಾದೇಶಿಕ, ರಾಜಕೀಯ ಹಾಗೂ ಆರ್ಥಿಕ ಪುನರ್‌ರಚನೆ, ಉದಾಹರಣೆಗೆ, ಇಡೀ ಯೂರೋಪಿನ ಒಟ್ಟುಗೂಡುವಿಕೆಗೆ ತೆಗೆದುಕೊಂಡ ಕ್ರಮಗಳು ಹಾಗೂ ಪ್ರಜಾಪ್ರಭುತ್ವಕ್ಕೆ ಪರಿವರ್ತನೆಗೊಳ್ಳುತ್ತಿರುವ ಸಮಾಜದಲ್ಲಿ, ಪ್ರಜಾಪ್ರಭುತ್ವದ ಬಲವರ್ಧನೆಗೆ ಒದಗಿದ ತೊಂದರೆಗಳು. ಆದರೆ ಪೌರತ್ವದ ಕಲ್ಪನೆಯನ್ನು ಪುನಃ ಪರೀಕ್ಷಿಸುವಂತೆ ಈ ವಿಷಯಗಳು ಆಗಾಗ ಪ್ರಚೋದಿಸುತ್ತವೆಂಬುದು ಆಶ್ಚರ್ಯಕರವೇನಲ್ಲ.

ಈ ಕೆಳಕಂಡ ಮೊದಲ ವಿಭಾಗದಲ್ಲಿ ಚರ್ಚಿಸಲಾಗುವ ಅನೇಕ ತಾತ್ವಿಕ ವಿಚಾರಗಳ ಹಿಂದೆ ಪ್ರಚಲಿತ ಮತ್ತು ವ್ಯಾವಹಾರಿಕ ಕಾಳಜಿಗಳಿವೆ. ಈ ವಿಭಾಗದ ಮೊದಲ ಭಾಗದಲ್ಲಿರುವ ವಿಷಯಗಳು ಬಹಳ ಕಾಲದಿಂದ ಚರ್ಚೆಯಲ್ಲಿದ್ದರೂ, ಇವುಗಳ ಬಗ್ಗೆ ಬಗೆಹರಿಸಬೇಕಾದ ಅನೇಕ ಪ್ರಶ್ನೆಗಳು ಉದ್ಭವಿಸುತ್ತಲೇ ಇವೆ. ಅಂತಹ ವಿಷಯಗಳ ಬಗ್ಗೆ ಇಲ್ಲಿ ಗಮನಹರಿಸುತ್ತೇವೆ. ನಂತರದ ಭಾಗದಲ್ಲಿ ಈ ಚರ್ಚೆಗೆ ಹೊಸದಾಗಿ ಸೇರ್ಪಡೆಗೊಂಡಿರುವ ವಿಚಾರಗಳ ಬಗ್ಗೆ ಹೆಚ್ಚು ಆಳವಾಗಿ ದೃಷ್ಟಿಹರಿಸಲಾಗಿದೆ.

ಹಲವಾರು ಬರಹಗಾರರ ಪ್ರಕಾರ ಹೀಗೆ ಪ್ರವರ್ಧಮಾನದಲ್ಲಿರುವ ಈ ಕ್ಷೇತ್ರಕ್ಕೆ ಒಂದು ವ್ಯವಸ್ಥೆಯನ್ನು ತರುವ ಅಗತ್ಯವಿದೆ. ಅದಕ್ಕೆ ಅನುಗುಣವಾಗಿ ಹಲವಾರು ಹೊಸ ಪರಿಕಲ್ಪನೆಗಳನ್ನು, ಭೇದಗಳನ್ನು ಪರಿಚಯಿಸಲಾಗುತ್ತದೆ. ಇದರಲ್ಲಿ ಗರಿಷ್ಠ/ಕನಿಷ್ಠ ಮತ್ತು ಸಕ್ರಿಯ/ನಿಷ್ಕ್ರಿಯ ಎನ್ನುವ  ಭೇದಗಳು ಗಮನಾರ್ಹ. ಈ ಎರಡೂ ಜೋಡಿಗಳಲ್ಲಿರುವ ಮೊದಲ ಪರಿಕಲ್ಪನೆಯು ಪ್ರಜಾತಾಂತ್ರಿಕ ಪೌರತ್ವದ ಅಪೇಕ್ಷಣೀಯ ಆದರ್ಶದ ಗುರಿಯನ್ನು ಪ್ರತಿನಿಧಿಸುತ್ತದೆ ಎನ್ನುವ ನಂಬಿಕೆಯೂ ಉಂಟು. ಆದರೆ, ಪ್ರಮುಖ ವಿಷಯಗಳ ಚರ್ಚೆಯ ವಸ್ತುಸ್ಥಿತಿಯನ್ನು ಗಮನಿಸಿದರೆ, ವಿಚಾರ ಇಷ್ಟು ಸ್ಪಷ್ಟವಾಗಿಲ್ಲವೆಂಬುದು  ವ್ಯಕ್ತವಾಗುತ್ತದೆ. ಈ ಭೇದವನ್ನು ಬಳಸುವ ರೀತಿಯಲ್ಲೇ ವ್ಯತ್ಯಾಸಗಳಿರುವುದರಿಂದ, ಸಕಾರಾತ್ಮಕವಾಗಿ ಕಾಣುವ ಗರಿಷ್ಠ/ಸಕ್ರಿಯ ಪೌರತ್ವ ಎನ್ನುವ ಪರಿಕಲ್ಪನೆಯೇ ಸದಾನಕಾರಾತ್ಮಕವಾಗಿ ಕಾಣುವ ಕನಿಷ್ಠ/ನಿಷ್ಕ್ರಿಯ ಪೌರತ್ವ ಎನ್ನುವ ಪರಿಕಲ್ಪನೆಗಿಂತ ಉತ್ತಮವಾದದ್ದು ಎಂದು ಹೇಳಲು ಬರುವುದಿಲ್ಲ. ಈ ಭೇದಗಳನ್ನು ಬಳಸುವ ಬಗೆ ಹೇಗೆ ಮತ್ತು ಅವುಗಳ ಪ್ರಯೋಜನವೇನು ಎನ್ನುವ ವಿಚಾರವು ಮೊದಲ ಭಾಗದಲ್ಲಿ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಎರಡನೇ ಭಾಗದಲ್ಲಿ ಸಮಾನವಾಗಿ ಚರ್ಚೆಗೆ ಒಳಪಟ್ಟಿದೆ.

### ಕೆಲವು ಗಡಿರೇಖೆಗಳು

ಪೌರತ್ವವನ್ನು ಕುರಿತ ಗರಿಷ್ಠ ಅಥವಾ ಕನಿಷ್ಠ, ಸಕ್ರಿಯ ಅಥವಾ ನಿಷ್ಕ್ರಿಯ, ಎಂಬ ಪರಿಕಲ್ಪನೆಗಳನ್ನು ಒತ್ತಟ್ಟಿಗಿಟ್ಟು, (ಆ ಪದಗಳಿಗಿರುವ ಅನೇಕ ಅರ್ಥಗಳನ್ನೊಳಗೊಂಡಂತೆ) ಪೌರತ್ವವೆಂಬುದು, ಒಂದು ರಾಷ್ಟ್ರವು ನೀಡುವ ಕಾನೂನಾತ್ಮಕ ಸ್ಥಾನಮಾನ ಎಂದು ಹೇಳಬಹುದಾಗಿದೆ. ಹಾಗಾಗಿ ಅದು ಜನರನ್ನು ಪರಿವರ್ತನೆಗೊಳಿಸುತ್ತದೆ. ಫ್ರಾನ್ಸಿನ ಈಗಿನ 5ನೇ ಗಣರಾಜ್ಯದಲ್ಲಿ ಹಾಗೂ ವಿಶಿ ಆಡಳಿತದಲ್ಲಿದ್ದ ಪ್ರಜೆಗಳು ಭೌತಿಕವಾಗಿ ಅವರೇ ಆಗಿದ್ದರೂ, ಬೇರೆ ಬೇರೆ ನಾಗರಿಕರಾಗಿದ್ದರು (ಸಿ.ಎಫ್. ಶ್ಕ್ಲರ್, 1995, ಪುಟ 8). ಜರ್ಮನಿಯ ವೇಯ್ಮಾರ್ ಗಣರಾಜ್ಯ ಹಾಗೂ ಮೂರನೇ ರೀಯ್ಕ್ ಬಗ್ಗೆಯೂ ಹೀಗೆ ಹೇಳಬಹುದು. ಹಳೆಯ ಆಡಳಿತದ ಬದಲು ಹೊಸ ಆಡಳಿತ ಬಂದಾಗ; ನೀಡಿದ್ದ ಹಕ್ಕುಗಳು, ಅಗತ್ಯವಿರುವ ಕರ್ತವ್ಯ, ನಾಗರಿಕ ಆಕಾಂಕ್ಷೆಗಳಿಗೆ ಪ್ರೋತ್ಸಾಹ ಹಾಗೂ ಒಬ್ಬ ಒಳ್ಳೆಯ ನಾಗರಿಕ ಎಂಬ ಪರಿಕಲ್ಪನೆಗಳೆಲ್ಲವೂ ಬದಲಾದವು.

ಪೌರತ್ವವು ಪ್ರಾಕೃತಿಕವಾಗಿ ಅಥವಾ ಸಾಮಾಜಿಕವಾಗಿ ಸಿಗುವಂಥದ್ದಲ್ಲ. ಅದನ್ನು ಒಂದು ರಾಷ್ಟ್ರವು ನೀಡುವಂಥದ್ದು. ಹೀಗಾಗಿ, ಒಂದು ರಾಜಕೀಯ ಸಮುದಾಯವು ಅದನ್ನು ಯಾರಿಗೆ ನೀಡಬೇಕು ಅಥವಾ ನೀಡಬಾರದೆಂಬುದನ್ನು ನಿಶ್ಚಯಿಸುತ್ತದೆ. ಇತಿಹಾಸದಲ್ಲಿ ಹಾಗೂ ಸಮಕಾಲೀನ ಪ್ರಪಂಚದಲ್ಲಿ ಹೀಗೆ ಪೌರತ್ವದಿಂದ ಯಾರನ್ನು ಹೊರಗಿಡಬೇಕು ಎನ್ನುವ ನಿರ್ಧಾರಗಳ ಉದಾಹರಣೆಗಳು ಚಿರಪರಿಚಿತವೇ. ಕೆಲವನ್ನಷ್ಟೇ ಇಲ್ಲಿ ಉದಾಹರಿಸಬೇಕೆಂದರೆ, ಪ್ರಜಾಪ್ರಭುತ್ವಗಳೆನಿಸಿಕೊಂಡ ಎಷ್ಟೋ ವ್ಯವಸ್ಥೆಗಳಲ್ಲೂ ಮಹಿಳೆಯರಿಗೆ ಕಳೆದ ಶತಮಾನದಲ್ಲಷ್ಟೇ ಪೌರತ್ವದ ಪಟ್ಟ ನೀಡಲಾಯಿತು, ಹಲವು ಯುರೋಪಿಯನ್ ರಾಷ್ಟ್ರಗಳಲ್ಲಿ ಇಂದಿಗೂ ಅತಿಥಿ ಕಾರ್ಮಿಕರನ್ನು ಪೌರತ್ವ ಪಡೆಯದಂತೆ ಬೇರ್ಪಡಿಸಿದ್ದಾರೆ ಹಾಗೂ ಬೇರೆ ಬೇರೆ ಕಾಲಘಟ್ಟಗಳಲ್ಲಿ ಅನೇಕ ರಾಷ್ಟ್ರಗಳಲ್ಲಿ ಮಕ್ಕಳನ್ನೂ ನಾಗರಿಕತ್ವದಿಂದ ಹೊರಗಿಡಲಾಗಿದೆ.

ಈ ಹೊರಗಿಡುವುದರ ಹಿಂದಿನ ಕಾರಣಗಳಾವುವು? ಪ್ರಜಾತಾಂತ್ರಿಕ ಸಮಾಜದಲ್ಲಿ ಇಂತಹ ಯಾವುದೇ ನಡುವಳಿಕೆಯನ್ನು ಸರ್ಮಥಿಸಬಹುದೇ? ಯಾವ ಆಧಾರದ ಮೇಲೆ ಹೀಗೆ ಕೆಲವು ಸಮುದಾಯಗಳನ್ನು ಮಾತ್ರ ಪೌರತ್ವ ಪಡೆಯದಂತೆ ಹೊರಗುಳಿಸಲಾಯಿತು ಎಂಬುದನ್ನು ಪರಿಶೀಲಿಸಿದಲ್ಲಿ ಪೌರತ್ವವನ್ನು ಪಡೆಯುವ ಸೂಕ್ತ ಮಾನದಂಡಗಳಾವುವು ಎಂಬುದರ ಮೇಲೇನಾದರೂ ಬೆಳಕು ಹರಿಸಬಹುದೇ?

ಮೇಲ್ನೋಟಕ್ಕೆ, ಮಹಿಳೆಯರಿಗೆ ಸಮಾಜದ ಸಾರ್ವಜನಿಕ ಜೀವನದಲ್ಲಿ ಅಧಿಕೃತವಾದ ಯಾವುದೇ ಪಾತ್ರವಿರಲಿಲ್ಲ. ಆ ಕಾರಣದಿಂದ ಅವರಲ್ಲಿ ರಾಜ್ಯದ ವ್ಯವಹಾರಗಳಲ್ಲಿ ಪಾಲ್ಗೊಳ್ಳಲು ಬೇಕಾದ ಜ್ಞಾನದ ಕೊರತೆಯಿತ್ತು. ಹಾಗಾಗಿ ಸಾಂಪ್ರದಾಯಿಕವಾಗಿ ಅವರನ್ನು ಪೌರತ್ವದಿಂದ ಹೊರಗಿಡಲಾಗಿತ್ತು. ಮಕ್ಕಳನ್ನು ನಡೆಸಿಕೊಳ್ಳುವಂತೆಯೇ ಮಹಿಳೆಯರನ್ನು ನಡೆಸಿಕೊಳ್ಳುತ್ತಿದ್ದರಲ್ಲದೆ, ಆ ಎರಡೂ ಗುಂಪಿನ ಬೇಕು–ಬೇಡಗಳನ್ನು ಮನೆಯ ಯಜಮಾನಿಕೆಯನ್ನು ನಡೆಸುವ ಪುರುಷರು ಪೂರೈಸುತ್ತಿದ್ದರು. ಒಂದು ರಾಷ್ಟ್ರದ ಅತಿಥಿ ಕೆಲಸಗಾರರು ಆ ದೇಶದಲ್ಲಿರುವ ಕೆಳಹಂತದ ಅಥವಾ ಅಪಾಯಕಾರಿ ಕೆಲಸಗಳಿಗೆ ತಮ್ಮನ್ನು ಒಡ್ಡಿಕೊಳ್ಳದೇ, ಅರ್ಥವ್ಯವಸ್ಥೆಗೆ ತಾತ್ಕಾಲಿಕ ಬೆಂಬಲವನ್ನಷ್ಟೇ ನೀಡುತ್ತಿದ್ದ ಕಾರಣ, ಅವರುಗಳನ್ನು ಪ್ರವಾಸಿಗರು ಎಂದೇ ಪರಿಗಣಿಸಿ, ಅಂಥವರಿಗೆ ಪೌರತ್ವದ ಸೌಲಭ್ಯವನ್ನು ನೀಡಿರಲಿಲ್ಲ (ವಾಲ್‌ಝರ್, 1983, ಅಧ್ಯಾಯ 2).

ಮಕ್ಕಳ ಮತ್ತು ಐತಿಹಾಸಿಕವಾಗಿ ಮಹಿಳೆಯರ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಜ್ಞಾನ ಮತ್ತು ಪ್ರಬುದ್ಧ ತೀರ್ಮಾನಗಳ ಕೊರತೆ ಹಾಗೂ ಅತಿಥಿ ಕೆಲಸಗಾರರು, ಪ್ರಗತಿಪರ ಸಮುದಾಯದ ಜೊತೆ ದೀರ್ಘಾವಧಿಯಲ್ಲಿ ಯಾವುದೇ ರೀತಿಯ ಬದ್ಧತೆ ಹೊಂದದಿರುವುದು ಅವರನ್ನು ಪೌರತ್ವದಿಂದ ದೂರವಿಟ್ಟದ್ದಕ್ಕೆ ಕಾರಣಗಳೆನ್ನಬಹುದು. ಈ ಗುಂಪುಗಳನ್ನು ಹೊರಗಿಡುವುದರ ನ್ಯಾಯಾನ್ಯಾಯವನ್ನು ಪಕ್ಕಕ್ಕಿಟ್ಟು ನೋಡಿದರೂ; ಒಂದು ಪ್ರಜಾತಾಂತ್ರಿಕ ಸಮುದಾಯಕ್ಕೆ, ಕೆಲವರಿಗೆ ಪೌರತ್ವವನ್ನು ನೀಡುವ ಅಥವಾ ನಿರಾಕರಿಸುವ ತೀರ್ಮಾನವನ್ನು ತೆಗೆದುಕೊಳ್ಳಲು ಇವು ಸೂಕ್ತ ಮಾನದಂಡಗಳೇ? ಜ್ಞಾನ ಮತ್ತು ಬದ್ಧತೆಗಳು ಈ ಸಂದರ್ಭದಲ್ಲಿನ ನಿರ್ಣಾಯಕ ಅರ್ಹತೆಗಳೇ? ಹಾಗಿದ್ದಲ್ಲಿ, ಶಿಕ್ಷಣಕ್ಕೂ ಇದಕ್ಕೂ ನೇರ ಸಂಬಂಧವಿದೆಯೇ? ಪ್ರಜಾಪ್ರಭುತ್ವದ ರಾಜ್ಯವ್ಯವಸ್ಥೆಗೆ ಅವಶ್ಯವಿರುವ ಜ್ಞಾನ ಮತ್ತು ಕೆಲವು ನಾಗರಿಕ ಬದ್ಧತೆಯನ್ನು ಉತ್ತೇಜಿಸುವಂತಹ ನಾಗರಿಕ ಶಿಕ್ಷಣದ ಅಗತ್ಯ ಪ್ರಜಾಪ್ರಭುತ್ವ ವ್ಯವಸ್ಥೆಗೆ ಇದೆಯೇ? ಹಾಗಾದಲ್ಲಿ, ಪೌರತ್ವ ನೀಡುವ ಮುನ್ನ ಆ ಜ್ಞಾನ ಮತ್ತು ಬದ್ಧತೆಯನ್ನು ಅಳೆಯಲು ಪರೀಕ್ಷೆ ನಡೆಸಬೇಕೆ? ಎಂಬ ಪ್ರಶ್ನೆಗಳಿವೆ.

ಅಥವ, ಪೌರತ್ವ ಪಡೆಯಲು ಸೂಕ್ತ ಜ್ಞಾನದ ಅಗತ್ಯವಿದೆ ಎಂಬ ಊಹೆಯೇ ನಮ್ಮನ್ನು ಒಂದು ಬೇಡದ ದಾರಿಗೆ ಕೊಂಡೊಯ್ಯುತ್ತಿದೆಯೇ? ಪೌರತ್ವವನ್ನು ಸಂಪಾದಿಸಬೇಕು ಎಂದು ತಿಳಿಯುವ ಬದಲಾಗಿ, ಅದನ್ನು ಒಂದು ರಾಷ್ಟ್ರವು ಎಲ್ಲರಿಗೂ ನೀಡುವ ಒಂದು ಸ್ಥಾನ ಎಂದು ತಿಳಿಯಬೇಕು. ಅಂದರೆ, 'ಪ್ರಜಾಪ್ರಭುತ್ವದ ಆದರ್ಶಕ್ಕೆ ಮೂರ್ತರೂಪವಾದ ರಾಜಕೀಯ ಸಮಾನತೆ' ಎಂಬುದು ಇದರ ಹಿನ್ನೆಲೆಯ ಪರ್ಯಾಯ ತಿಳುವಳಿಕೆ. ಇದಕ್ಕೆ ವ್ಯತಿರಿಕ್ತವಾಗಿರುವುದು ಎಂದರೆ, ಕೆಲವು ಜನರನ್ನು ಅಕ್ಷರಶಃ ರಾಜ್ಯವ್ಯವಸ್ಥೆಯ ಗಡಿಯಾಚೆ ಇಟ್ಟಂತೆ. "ಒಬ್ಬ ವ್ಯಕ್ತಿಯ ಧ್ವನಿ ಕೇಳದಿದ್ದಲ್ಲಿ ಆ ವ್ಯಕ್ತಿ ಬದುಕಿಲ್ಲದ ಹಾಗೆ, ರಾಜಕೀಯವಾಗಿ ಅಸ್ತಿತ್ವ ಅಥವಾ ನೆಲೆಯಿಲ್ಲದ ಹಾಗೆ." (ಈ ವಾದದ ಒಂದು ಸೂಕ್ತ ಉದಾಹರಣೆಗಾಗಿ ನೋಡಿ: ಶ್ಕ್ಲರ್, 1995).

'ಪ್ರಜಾತಾಂತ್ರಿಕ ಪೌರತ್ವ' ಎನ್ನುವುದು ಒಂದು ರಾಜ್ಯದ ಎಲ್ಲರೂ 'ಸಮಾನವಾಗಿ ಭಾಜನರಾದ ಹಕ್ಕು' ಎಂಬ ತಿಳುವಳಿಕೆಯ ಪರಿಣಾಮವೇನು? ಮಕ್ಕಳ ಉದಾಹರಣೆಯನ್ನು ಪುನಃ ನೆನಪಿಸಿಕೊಂಡರೆ, ಒಂದು ಸಣ್ಣ ವಯಸ್ಸಿನ ಮಗುವಿಗೆ ಒಂದು ಗೀಟು ಎಳೆಯಲು ಬರುತ್ತದೆ ಎಂದಾಕ್ಷಣ ಅದು ಮತ ಚಲಾಯಿಸಲೂ ಸಿದ್ಧವಾಗಿದೆ ಎಂದಲ್ಲ. ಬದಲಾಗಿ, ದೊಡ್ಡವರಂತೆಯೇ ಮಕ್ಕಳೂ ಸಹ ಶೋಷಣೆಯ ವಿರುದ್ಧ ಹಾಗೂ ಈ ತರಹದ ಇನ್ನೂ ಅನೇಕ ಹಕ್ಕುಗಳಿಗೆ ಭಾಜನರಾಗುವ ಸಾಧ್ಯತೆಯಿದೆ. ಅತಿಥಿ ಸಿಬ್ಬಂದಿ ವರ್ಗದವರಿಗೆ ಸಂಬಂಧಪಟ್ಟಂತೆಯೂ ಹೀಗೆ ಹೇಳಬಹುದು. ಬೇರೆ ಪ್ರಜೆಗಳಿಗಿರುವ ಹಾಗೆ ಅವರುಗಳೂ ಸಹ ತಮ್ಮ ಅನೇಕ ಹಕ್ಕುಗಳನ್ನು ಸಂತೋಷವಾಗಿ ಅನುಭವಿಸಲು ಯಾಕಾಗಬಾರದು? ವಾಸ್ತವವಾಗಿ ಅವರು ಹುಟ್ಟಿದ ದೇಶ ಹಾಗೂ ಕಾರ್ಯನಿರ್ವಹಿಸುವ ದೇಶಗಳೆರಡರಲ್ಲೂ ದ್ವಿಪೌರತ್ವ ಯಾಕಿರಬಾರದು? ಆದಾಗ್ಯೂ, ಈ ವಾದವನ್ನು ಎತ್ತಿಹಿಡಿದರೆ, ಪೌರತ್ವ ಪಡೆಯಲು ಶಿಕ್ಷಣ ಅಥವಾ ಬದ್ಧತೆಯ ಅಗತ್ಯವಿಲ್ಲ ಎಂಬ ವಿಚಿತ್ರ ತೀರ್ಮಾನಕ್ಕೆ ಎಡೆಮಾಡಿಕೊಡುತ್ತದೆಯೇ?

ಖಂಡಿತ ಹಾಗಾಗುವುದಿಲ್ಲ. ಈ ಉದಾಹರಣೆಗಳು ಪೌರತ್ವದ ದ್ವಿಸ್ತರದ ಲಕ್ಷಣವನ್ನು ತಿಳಿಸುತ್ತಿವೆ. ಒಂದು ರೀತಿಯಿಂದ, ಅದು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾದ ಸ್ಥಾನಮಾನ. ಇನ್ನೊಂದು ರೀತಿಯಿಂದ ಅದೊಂದು ಪ್ರಮಾಣಕವಾದ ಅಥವಾ ನಾರ್ಮೆಟಿವ್ ಆದರ್ಶ. ನಾಗರಿಕರು ಒಳ್ಳೆಯ ನಾಗರಿಕರಾಗಬಹುದು ಮತ್ತು ಒಳ್ಳೆಯ ನಾಗರಿಕರು ಬೇರೆ ಬೇರೆ ರೀತಿಯಲ್ಲಿರಬಹುದು. ಕೆಲವೊಮ್ಮೆ ನಾಗರಿಕ/ಒಳ್ಳೆಯ ನಾಗರಿಕ ಎನ್ನುವ ಭೇದ ಕನಿಷ್ಠ/ಗರಿಷ್ಠ ಮತ್ತು ನಿಷ್ಕ್ರಿಯ/ಸಕ್ರಿಯ ಎನ್ನುವ ಭೇದಗಳಿಂದ ರೂಪಿತವಾದಂತೆ ಕಂಡರೂ, ಈ ವಿಂಗಡಣೆಯು ಎಷ್ಟೋ ಬಾರಿ ಹಲವು ಮುಖ್ಯವಾದ ಸಾಧ್ಯತೆಗಳನ್ನು ಗ್ರಹಿಸುವುದಕ್ಕೆ ಸಾಕಾಗುವುದಿಲ್ಲ ಎಂದೂ ತಿಳಿಯುತ್ತದೆ.

ಹಾಗಾಗಿ, ಪೌರತ್ವವನ್ನು ಹೊಂದಿದ್ದರೆ, ಶಿಕ್ಷಣ ಮತ್ತು ಬದ್ಧತೆಗೆ ಅದರಿಂದ ಅವಕಾಶ ಮತ್ತು ಪ್ರಚೋದನೆ ದೊರೆಯುತ್ತದೆ. ಅಮೆರಿಕದಲ್ಲಿ ಕಪ್ಪು ಜನಾಂಗಕ್ಕೆ ಮತಚಲಾಯಿಸುವ ಹಕ್ಕನ್ನು ನೀಡಬೇಕೆಂಬ ವಾದಗಳು (ನೋಡಿ ಶ್ಕ್ಲರ್, 1995, ಪುಟ 52 ಹಾಗೂ ಮುಂದಿನ ಪುಟಗಳು) ಹಾಗೂ ಪ್ರಜಾಪ್ರಭುತ್ವದ ಶೈಕಣಿಕ ಮೌಲ್ಯದ ಕುರಿತು ವಾದಿಸಿದ ಹಲವರ ಕೃತಿಗಳಿಂದಾಗಿ (ಹೋಲಿಸಿ ನೋಡಿ: ಜೆ.ಎಸ್. ಮಿಲ್) ಈ ವಿಷಯವು ಪರಿಚಿತವಾಗಿದೆ.

**ಹಕ್ಕುಗಳ ಧಾರಕರಾಗಿ ನಾಗರಿಕರು**

ಎಲ್ಲಾ ನಾಗರಿಕರಿಗೆ ಕೊಡಮಾಡಿರುವ ಈ ಸ್ಥಾನವಾದರೂ ಯಾವುದು? ನಾಗರಿಕರಿಗೆ ಇದು ಯಾವ ಹಕ್ಕುಗಳನ್ನು ನೀಡುತ್ತದೆ? ಪ್ರಜಾತಾಂತ್ರಿಕಪೂರ್ವ ಸಮಾಜಗಳು ಮತ್ತು ಪ್ರಜಾತಂತ್ರಕ್ಕೆ ಹಂಬಲಿಸುತ್ತಿರುವ ಸಮಾಜಗಳಲ್ಲಿನ ಹಕ್ಕುಗಳ ವ್ಯಾಪ್ತಿಯಲ್ಲಿನ ಮಾರ್ಪಾಡುಗಳು ಮತ್ತು ವಿಸ್ತರಣೆಯೇ ಪೌರತ್ವದ ಲಕ್ಷಣವನ್ನು ಅರ್ಥಮಾಡಿಕೊಳ್ಳುವುದಕ್ಕೆ ಇರುವ ಅತ್ಯುತ್ತಮ ನಿದರ್ಶನ. ಹದಿನೆಂಟನೆಯ ಶತಮಾನದಿಂದ ಇಪ್ಪತ್ತನೆಯ ಶತಮಾನದವರೆಗೆ ಪ್ರಜಾಪ್ರಭುತ್ವವನ್ನು ಹೊಂದಿರುವ ಪಶ್ಚಿಮದ ದೇಶಗಳಲ್ಲಿನ ನಾಗರಿಕ ಹಕ್ಕುಗಳಿಂದ (ಉದಾ: ಸ್ವಂತ ಆಸ್ತಿಯನ್ನು ಹೊಂದುವ ಹಕ್ಕು) ರಾಜಕೀಯ ಹಕ್ಕುಗಳವರೆಗೆ (ಉದಾ: ಮತ ಚಲಾಯಿಸುವ ಹಕ್ಕು), ನಂತರದಲ್ಲಿನ ಸಾಮಾಜಿಕ ಹಕ್ಕುಗಳವರೆಗೆ (ಉದಾ: ಕನಿಷ್ಠ ಮಟ್ಟದ ಆರೋಗ್ಯ ಸೇವೆ ಮತ್ತು ಸಾಮಾಜಿಕ ಭದ್ರತೆಯನ್ನು ಪಡೆಯುವ ಹಕ್ಕು) ಆದ ಸುಧಾರಣೆಗಳನ್ನು ಮಾರ್ಷಲ್ ಅವರು ಗಮನಿಸಿದ್ದಾರೆ (ಮಾರ್ಷಲ್, 1950). ಆದರೆ, ನಾಗರಿಕರ ಹಕ್ಕುಗಳ ವಿಸ್ತರಣೆಯ ಈ ಪ್ರಗತಿಪರ  ಮುನ್ನಡೆಗೆ ವಿರೋಧವೂ ವ್ಯಕ್ತವಾಗಿದೆ. ನಾಗರಿಕತ್ವಕ್ಕೆ ಸೇರಿಸಬಹುದಾದ ಏಕೈಕ ಕಾನೂನುಬದ್ಧ ಹಕ್ಕೆಂದರೆ, ಅದು "ಸ್ವಾತಂತ್ರ್ಯದ" ಹಕ್ಕು (ಉದಾ: ಅನಿಯಂತ್ರಿತ ಬಂಧನದಿಂದ ಸ್ವಾತಂತ್ರ್ಯ, ಮತ ಚಲಾಯಿಸುವ ಹಕ್ಕು, ಮುಕ್ತವಾಗಿ ಮಾತನಾಡುವ ಹಕ್ಕು) ಎಂದು ವಾದಿಸಲಾಗಿದೆ. "ಸಾಮಾಜಿಕ ಕಲ್ಯಾಣ" ಹಕ್ಕುಗಳೆಂದು ಕರೆಸಿಕೊಳ್ಳುವಂತಹ ಹಕ್ಕುಗಳು ಅಸಾಧ್ಯ ಎನ್ನಿಸುವ ಮಟ್ಟದ ಹಕ್ಕುಗಳನ್ನು ಬೇಡುತ್ತವೆ. ಬಹುಶಃ ಅದನ್ನು ಸಾಕಾರಗೊಳಿಸುವುದೂ ಅಸಾಧ್ಯ. (ಈ ವಿಚಾರವಾಗಿ ಕ್ರಾನ್‌ಸ್ಟನ್ ಅವರ ಹೇಳಿಕೆ, 1967, ಪು. 50–3 ಹಾಗೂ ವಾಲ್‌ಡ್ರನ್‌ರವರ ಪ್ರತಿಕ್ರಿಯೆ: 1995, ಪು. 580ನ್ನು ನೋಡಿ).

ಹಾಗಾಗಿ, ನಾಗರಿಕನು ಹಕ್ಕುಗಳ ಧಾರಕ (ಕಿಮ್‌ಲಿಕ ಮತ್ತು ನಾರ್‌ಮ್ಯಾನ್, 1994, ಪು. 354) ಎನ್ನುವ (ಒಂದು ದೃಷ್ಟಿಕೋನದ ಪ್ರಕಾರ, ಕನಿಷ್ಠ ಎಂದು ಕರೆಯಬಹುದಾದ) ಅಭಿಪ್ರಾಯದ ಪರಧಿಯೊಳಗೆ ಕನಿಷ್ಠ/ಗರಿಷ್ಠ ಹಕ್ಕುಗಳ ಪರಿಕಲ್ಪನೆಯ ಒಂದು ರೂಪವನ್ನು ನಾವು ಕಾಣುತ್ತೇವೆ: ಸ್ವಾತಂತ್ರ್ಯದ ಹಕ್ಕುಗಳ ಮೇಲೆ ಆಧಾರಿತವಾಗಿರುವ ನಾಗರಿಕತ್ವದ ಕನಿಷ್ಠ ಕಲ್ಪನೆ ಹಾಗೂ ಸಾಮಾಜಿಕ ಕಲ್ಯಾಣ ಹಕ್ಕುಗಳ ಮೇಲೆ ಆಧಾರಿತವಾಗಿರುವ ಗರಿಷ್ಠ ಕಲ್ಪನೆಗಳಲ್ಲಿನ ವ್ಯತ್ಯಾಸಗಳಿಗೂ ಸಹ ಇದನ್ನು ಅನ್ವಯಿಸಬಹುದಾಗಿದೆ.

ಆದರೆ ಮತ್ತೊಂದು ದೃಷ್ಟಿಕೋನದ ಪ್ರಕಾರ, ಕಲ್ಯಾಣ ಹಕ್ಕುಗಳನ್ನು ಒಳಗೊಂಡ ಒಂದು ಗರಿಷ್ಠ ಮಟ್ಟದ ಪೌರತ್ವದ ಕಲ್ಪನೆಯೂ ಸಹ, ಲಿಂಗಾಧಾರಿತ ಸಂವೇದನೆಗಳನ್ನು ಕುರಿತಂತೆ ವಿಫಲವಾದಲ್ಲಿ, ಕನಿಷ್ಠ ಮಟ್ಟದ್ದಾಗಿ ಕಾಣುತ್ತದೆ. ಕೆಳಗೆ ಚರ್ಚಿಸಲಾಗಿರುವಂತೆ, (ನೋಡಿ: "ಸ್ತ್ರೀವಾದಿ ಸಿದ್ಧಾಂತ ಮತ್ತು ಸಕ್ರಿಯ ಪೌರತ್ವ") ಸಂಪೂರ್ಣ ಕಲ್ಯಾಣ ಹಕ್ಕುಗಳಿರುವ ಒಂದು ಸಮಾಜದಲ್ಲಿ; ಮಹಿಳೆಯರಿಗಿರುವ ಸಂಸಾರದ ಜವಾಬ್ದಾರಿಗಳಿಂದಾಗಿ, ರಾಜಕೀಯ ಜೀವನದ ಪಾಲ್ಗೊಳ್ಳುವಿಕೆಯು ಕೇವಲ ಕೆಲವು ವರ್ಷಗಳಿಗೊಮ್ಮೆ ಮತಗಟ್ಟೆಗಳಲ್ಲಿ ಕೆಲ ಸಮಯ ಕಳೆಯುವುದಷ್ಟಕ್ಕೇ ಸೀಮಿತವಾಗಿದೆ  (ಫಿಲಿಪ್ಸ್, 1991, ಪು. 157 ಎಫ್).

ಹೆಚ್ಚಿನ ನ್ಯಾಯವನ್ನು ಒದಗಿಸುವ ನಿಟ್ಟಿನಲ್ಲಿ; ವ್ಯಕ್ತಿಯೊಬ್ಬನನ್ನು ಹಕ್ಕುಗಳ ಧಾರಕನಾಗಿ ಗ್ರಹಿಸುವ ಪರಿಕಲ್ಪನೆಗೆ ಮತ್ತೊಂದು ಭೂಮಿಕೆಯಲ್ಲಿ ಆಕ್ಷೇಪವನ್ನು ವ್ಯಕ್ತಪಡಿಸಲಾಗಿದೆ. ನಾಗರಿಕತ್ವದ ಪರಿಕಲ್ಪನೆಯನ್ನು ಹೆಚ್ಚು ವಿಸ್ತೃತವಾಗಿ ಪರಿಭಾವಿಸುವ ವಾದಯೋಗ್ಯ ಪ್ರಕರಣಗಳನ್ನು; ಸಮುದಾಯಗಳ ಹಕ್ಕುಗಳು (ಫಿಲಿಪ್ಸ್, 1996; ಕೈಮ್ಲಿಕ 1996) ಹಾಗೂ ತಮ್ಮ ಸಮುದಾಯಗಳ ಮೇಲೆ ನೇರವಾಗಿ ಪ್ರಭಾವವನ್ನು ಬೀರುವಂಥವುಗಳನ್ನು ತುಳಿತಕ್ಕೊಳಗಾದ ವರ್ಗಗಳು ತಿರಸ್ಕರಿಸುವ ಅಧಿಕಾರದ ವಿಷಯಗಳಲ್ಲಿ (ಯಂಗ್, 1990ಎ, ಪು. 183–91) ಮಂಡಿಸಲಾಗಿದೆ. ಪ್ರಾತಿನಿಧ್ಯವನ್ನು ಐಡೆಂಟಿಟಿಯ ತಳಹದಿಯಲ್ಲಿ ಗ್ರಹಿಸಿದಲ್ಲಿ, ಸಮಸ್ಯೆಗಳ ಸರಮಾಲೆಯೇ ಉದ್ಭವಿಸುತ್ತದೆ (ಉದಾ: ಐಡೆಂಟಿಟಿಯ ಅನಪೇಕ್ಷಿತ ಅವಶ್ಯಕತೆಯನ್ನು ವ್ಯಕ್ತಿಯೊಬ್ಬನ ಮೇಲೆ ಹೇರುವುದು). ಕೆಲವು ಗುಂಪುಗಳ ವಕಾಲತ್ತುದಾರರಿಗೂ ಈ ಸಮಸ್ಯೆಗಳ ಬಗ್ಗೆ ಅರಿವಿದೆ. ಆದಾಗ್ಯೂ, ಗುಂಪಿನ ಪ್ರಾತಿನಿಧ್ಯವನ್ನು ಸಾಕಾರಗೊಳಿಸುವ ಪ್ರಯತ್ನಗಳನ್ನು ತೊರೆಯುವ ಬದಲು, ಸಾಮಾಜಿಕ ನ್ಯಾಯದ ಒಳಿತಿಗಾಗಿ, ಈ ಸಮಸ್ಯೆಗಳ ಬಗ್ಗೆ ಹೋರಾಡಬೇಕೆಂದು ಈ ವಕಾಲತ್ತುದಾರರು ಭಾವಿಸುತ್ತಾರೆ.

**ಪ್ರಜೆಗಳಿಗೆ ನಾಗರಿಕ ಗುಣಗಳ ಅಗತ್ಯವಿದೆಯೇ?**

ಒಬ್ಬ ಪ್ರಜೆಯು ಹಕ್ಕುಗಳ ಧಾರಕ ಎನ್ನುವಷ್ಟರಿಂದಲೇ ಆತನ ಪೌರತ್ವದ ಕನಿಷ್ಠ ಕಲ್ಪನೆ ರೂಪಿತಗೊಂಡಿದೆ ಎಂದು ಭಾವಿಸಿದರೆ ಅದು ಬಹಳ ಸರಳ ಯೋಚನೆಯಾಗುತ್ತದೆ. ನಮಗೆಲ್ಲಾ ತಿಳಿದೇ ಇರುವಂತೆ, ವಿಷಯಗಳು ಇದಕ್ಕಿಂತಲೂ ಹೆಚ್ಚು ಸಂಕೀರ್ಣವಾಗಿವೆ. ಒಬ್ಬ ಪ್ರಜೆಯು ಹಕ್ಕುಗಳ ಧಾರಕ ಎಂಬ ಕಲ್ಪನೆಗೆ ವಿಶಾಲವಾದ ಅಥವಾ ಸಂಕುಚಿತವಾದ ವ್ಯಾಖ್ಯಾನವನ್ನು ನೀಡಬಹುದು. ಇಂತಹ ಸೂಕ್ಷ್ಮವಾದ ವ್ಯತ್ಯಾಸಗಳನ್ನು ಹೊರತುಪಡಿಸಿದಲ್ಲಿ, ಒಬ್ಬ ಪ್ರಜೆಯು ಹಕ್ಕುಗಳ ನಿಷ್ಕ್ರಿಯ ಧಾರಕನೇ ಅಥವಾ ಸಾರ್ವಜನಿಕ ಕ್ಷೇತ್ರಗಳಲ್ಲಿ ಸಕ್ರಿಯನೇ ಎಂಬ ವ್ಯತ್ಯಾಸ ಕಂಡುಹಿಡಿಯುವುದು ಈ ಕನಿಷ್ಠ/ ಗರಿಷ್ಠ ಪೌರತ್ವದ ಪ್ರಮುಖ ಉಪಯೋಗವಾಗಿರಬಹುದು.

ಆದಾಗ್ಯೂ, ಈ ವ್ಯತ್ಯಾಸಗಳನ್ನು ವಿವಿಧ ರೀತಿಯಲ್ಲಿ ಅರ್ಥೈಸಿಕೊಳ್ಳಬಹುದು. ಬಹಳ ಢಾಳಾದ ರೀತಿಯಲ್ಲಿ ನೋಡುವುದಾದರೆ, ಪ್ರಜೆಯು ಹಕ್ಕುಗಳ ಧಾರಕ (ಕಲ್ಯಾಣ ಹಕ್ಕುಗಳು ಹಾಗೂ ಸ್ವಾತಂತ್ರ್ಯ ಹಕ್ಕುಗಳೂ ಸೇರಿದಂತೆ) ಮತ್ತು ಪ್ರಜೆ ಎಂದರೆ ಒಂದು ಗಣರಾಜ್ಯದ ಶಕ್ತ ಸದಸ್ಯ ಎನ್ನುವ ಎರಡು ಪರಿಕಲ್ಪನೆಗಳ ಮಧ್ಯೆ ವ್ಯತ್ಯಾಸವಿದೆ. ಎರಡನೆಯ ಗುಂಪಿನವರಿಗೆ, ರಾಜಕೀಯ ವ್ಯವಹಾರಗಳಲ್ಲಿ ಭಾಗವಹಿಸುವುದು ಸ್ವಾಭಾವಿಕ ಮೌಲ್ಯವಾಗಿರುತ್ತದಲ್ಲದೆ,. ತಮ್ಮ ಸಾಂಸಾರಿಕ ಸಂತೋಷ, ವೈಯಕ್ತಿಕ ಸಂಬಂಧಗಳು ಹಾಗೂ  ಕೆಲಸಗಳಿಗಿಂತ, ತಮ್ಮ ಸಮಾಜದ ರಾಜಕೀಯ ಜೀವನದಲ್ಲಿ  ಸಕ್ರಿಯವಾಗಿ ತೊಡಗಿಸಿಕೊಳ್ಳುವ ಕೆಲಸವೇ ಹೆಚ್ಚು ಶ್ರೇಷ್ಠವಾಗಿರುತ್ತದೆ. ನಾಗರಿಕ ಗಣತಂತ್ರವಾದಿಗಳು; ಪುರಾತನ ಗ್ರೀಸ್‌ನ ಲಕ್ಷಣವಾಗಿದ್ದ ಸಕ್ರಿಯ ನಾಗರಿಕತ್ವವನ್ನು ನಮ್ಮ ಈಗಿನ ಶಕ್ತಿಯುಡುಗಿಸುವ ರಾಜಕೀಯ ಜೀವನಕ್ಕೆ ಹೋಲಿಸಿ, ವ್ಯತ್ಯಾಸವನ್ನು ತೋರಿಸಿ, ಯಾವುದೇ ಒಬ್ಬ ನಾಗರಿಕನೂ, ತನ್ನ ಸ್ವಂತ ಜೀವನಕ್ಕಿಂತಲೂ ಸಾರ್ವಜನಿಕ ಜೀವನಕ್ಕೆ ಹೆಚ್ಚು ಒತ್ತುಕೊಡುವುದೇ ಸೂಕ್ತವಾದ ನಿಲುವು ಎಂದು ವಾದಿಸುತ್ತಾರೆ (ಶ್ಕ್ಲರ್, 1995, ಪುಟ. 11–12; ಓಲ್ಡ್ ಫೀಲ್ಡ್, 1990). ಇದಕ್ಕಿಂತಲೂ ಹೆಚ್ಚು ಸೂಕ್ಷ್ಮವಾದ ವಾದವನ್ನು ಮುಂದಿಡುವ ಸ್ಕಿನರ್,

"ನಾಗರಿಕನೆಂದರೆ ಗಣರಾಜ್ಯದ ಶಕ್ತ ಸದಸ್ಯ ಎನ್ನುವ ದೃಷ್ಟಿಯೇ, ವೈಯಕ್ತಿಕ ಸ್ವಾತಂತ್ರ್ಯಕ್ಕೂ ಇರುವ ಅತ್ಯಂತ ಸೂಕ್ತವಾದ ಮಾರ್ಗವೆಂದು ಹೇಳುತ್ತಾರೆ. ಸ್ಕಿನರ್ ಹೇಳುವಂತೆ, "ನಮಗೆ ವೈಯಕ್ತಿಕ ಸ್ವಾತಂತ್ರ್ಯದ ಇಚ್ಛೆ ಇದ್ದಲ್ಲಿ, ನಾವು ರಾಜಕುವರರ ಮೇಲೆ ನಂಬಿಕೆ ಇಡಬಾರದು; ಅದರ ಬದಲಾಗಿ ರಾಜಕೀಯ ಕ್ಷೇತ್ರವನ್ನು ನಾವಾಗಿಯೇ ನಮ್ಮ ಕೈವಶ ಮಾಡಿಕೊಳ್ಳಬೇಕು" (ಸ್ಕಿನರ್, 1992, ಪುಟ. 219 ಹಾಗೂ ನಂತರದ ಪುಟಗಳು).

ನಾಗರಿಕತ್ವ ಎನ್ನುವುದು ಒಬ್ಬ ವ್ಯಕ್ತಿಯ ಜೀವನದ ಅತ್ಯಂತ ಮುಖ್ಯವಾದ ಭಾಗ ಎನ್ನುವುದನ್ನು; ನಾಗರಿಕತ್ವ ಎನ್ನುವುದು ಒಬ್ಬ ವ್ಯಕ್ತಿಯ ಜೀವನದ ಹಲವು ಆಯಾಮಗಳಲ್ಲಿನ ಒಂದು ಮುಖ್ಯ ಆಯಾಮ ಮತ್ತು ಬೇರೆ ಬೇರೆ ವ್ಯಕ್ತಿಗಳು ಈ ಆಯಾಮವನ್ನು ವಿವಿಧ ಮಟ್ಟದಲ್ಲಿ ಮುಖ್ಯವೆಂದು ಪರಿಗಣಿಸಬಹುದು ಎನ್ನುವ ಆಧುನಿಕ ವಿಚಾರದೊಂದಿಗೆ ಹೋಲಿಸಬಹುದು. ಆಗ ನಾಗರಿಕತ್ವ ಎನ್ನುವುದು; ರಾಜಕೀಯದ ಪ್ರಕ್ರಿಯೆಯಲ್ಲಿಯೇ, ಜನರ ವೈಯಕ್ತಿಕ ಅಥವಾ ಸಾಮಾಜಿಕ ಯೋಜಿತ ಕಾರ್ಯಗಳನ್ನು ಈಡೇರಿಸಲು ಬೆಂಬಲವನ್ನು ನೀಡುವ ಒಂದು ಸಾಧನವಾಗಿ ತೋರುತ್ತದೆ. ಇದನ್ನೇ ಒಂದು ಅತಿಗೆ ಕೊಂಡೊಯ್ದರೆ, ಪೌರತ್ವ ಎನ್ನುವುದು ಒಬ್ಬ ವ್ಯಕ್ತಿಯ ಖಾಸಗಿ ಸ್ಥಾನಮಾನಗಳ ಜೊತೆಯಲ್ಲಿಯೇ ಇರುವ ಇನ್ನೊಂದು ನಾಮಮಾತ್ರದ ಹೆಚ್ಚುವರಿ ಸ್ಥಾನ ಎಂದಾಗುತ್ತದೆ. ಒಂದು ಗಣರಾಜ್ಯದ ಶಕ್ತ ಸದಸ್ಯನಾದ ನಾಗರಿಕನಿಗೆ ಹೋಲಿಸಿದರೆ, ಇಂತಹ ನಾಗರಿಕ ಒಂದು ಪ್ರಜಾತಾಂತ್ರಿಕ ವ್ಯವಸ್ಥೆಯ ಮೇಲುಸ್ತುವಾರಿ ಮಾಡುವಂತಹ ಯಾವ ನಾಗರಿಕ ಜವಾಬ್ದಾರಿಯನ್ನೂ ಹೊರಬೇಕಿಲ್ಲ. ಏಕೆಂದರೆ, ರಾಜಕೀಯ ಪ್ರಕ್ರಿಯೆಗಳೆಡೆಗಿನ ಪ್ರಜಾತಾಂತ್ರಿಕ ವಿಚಕ್ಷಣೆಯ ಜವಾಬ್ದಾರಿಗಳು ನೂರಾರು ವರ್ಷಗಳಿಂದ ಇದಕ್ಕಾಗಿಯೇ ಮುಡುಪಾಗಿರುವ ಪ್ರಜಾತಾಂತ್ರಿಕ ಸಂಸ್ಥೆಗಳ ಹೊಣೆಯಾಗಿರುತ್ತದೆ. (ಉದಾ: ಅಧಿಕೃತ ರಾಜಕೀಯ ಪ್ರತಿಪಕ್ಷಗಳು, ಮುಕ್ತ ಮಾಧ್ಯಮಗಳು ಮತ್ತು ಸ್ವತಂತ್ರ ನ್ಯಾಯಾಂಗ) ಹಾಗಾಗಿ, ಇಲ್ಲಿ ಒಬ್ಬ ನಿಷ್ಠಾವಂತ ಪ್ರಜೆಯನ್ನು ರೂಪಿಸುವ ಜರೂರಾಗಲಿ, ಅಂತಹ ಯೋಜನೆಯಲ್ಲಿ ಕಂಡುಬರುವ ನಿರಂಕುಶವಾದೀ ಹತೋಟಿಯಾಗಲಿ ಅಥವ ಪ್ರಜೆಗಳ ಸನ್ನಡತೆಯ ನಿಯಮಗಳಾಲಿ ಇರುವುದಿಲ್ಲ. (ಹೋಮ್ಸ್, 1995, ಪುಟ.75). ನಾಗರಿಕ ಸದ್ಗುಣಗಳ ಬದಲಾಗಿ ಆ ಜಾಗದಲ್ಲಿ ಸಂಕೀರ್ಣವಾದ ಪ್ರಜಾತಾಂತ್ರಿಕ ವ್ಯವಸ್ಥೆಗಳಿರುತ್ತವೆ.

ಆದರೆ ಇದು ಸ್ವಲ್ಪ ಸುಲಭದ ಮಾತಾಯಿತು. ಅಖಂಡವಾದ ರಾಜಕೀಯ ನಿಷ್ಠೆಯ ಆದರ್ಶವನ್ನು ಬಿಡುವುದೇನೋ ಒಳ್ಳೆಯದೇ ಇರಬಹುದು. ಆದರೆ, ನಾಗರಿಕ ಆದರ್ಶಗಳೇ ಇಲ್ಲದ ಒಂದು ಸಮುದಾಯದಲ್ಲಿ ಪ್ರಜಾಪ್ರಭುತ್ವವನ್ನು ಸಾಧಿಸಲು ಸಾಧ್ಯವೇ ಎಂಬುದು ಸ್ಪಷ್ಟವಾಗಿಲ್ಲ. ಹೋಮ್ಸ್ ಪ್ರತಿಪಾದಿಸುವಂತೆ; ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಬೆಂಬಲಿಸುವ, ಅದನ್ನು ನಿಭಾಯಿಸುವ ನಾಗರಿಕರು ಅದನ್ನು ದುರುಪಯೋಗಪಡಿಸದಂತೆ ನೋಡಿಕೊಳ್ಳಬೇಕೆಂದರೆ, ಅಂತಹ ನಾಗರಿಕರಿಗೇ ಕೆಲವು ಮೌಲ್ಯಗಳ ಅಗತ್ಯವಿದೆ. ಉದಾಹರಣೆಗೆ, ತಮಗೆ ಇಷ್ಟವಿಲ್ಲದ ಅಥವಾ ಜನಪ್ರಿಯವಲ್ಲದ ಅಭಿಪ್ರಾಯಗಳನ್ನು ಕೇಳಲು ಇಚ್ಛಿಸದ ಸಮಾಜದಲ್ಲಿ ಮುಕ್ತ ಮಾತುಕತೆಯ ಹಕ್ಕು ಬೆಳೆಯಲು ಸಾಧ್ಯವಿಲ್ಲ. ಮುಕ್ತ ಮಾತುಕತೆಯನ್ನು ಮೊಟಕುಗೊಳಿಸುವುದು ಕೇವಲ ಕಾನೂನಾತ್ಮಕ ಆಜ್ಞೆಗಳು ಮಾತ್ರವಲ್ಲ. ಸ್ವನಿಯಂತ್ರಣ ಮತ್ತು ಸಾರ್ವಜನಿಕ ಉದಾಸೀನತೆಯೂ ಕೂಡಾ ಮುಕ್ತ ಮಾತುಕತೆಯ ಹಕ್ಕನ್ನು ತಡೆಹಿಡಿಯಬಹುದು. ಹಾಗಾಗಿ, ಅತ್ಯಂತ ಅಭಿವೃದ್ಧಿ ಹೊಂದಿರುವ ರಾಜಕೀಯ ವ್ಯವಸ್ಥೆಯನ್ನುಳ್ಳ ಸಮಾಜದಲ್ಲೂ ಕೂಡ ನಾಗರಿಕರಿಗೆ, ನಂಬಿಕೆ ಮತ್ತು ಅಪನಂಬಿಕೆ (ಪಿ. ವೈಟ್, 1996, ಪುಟ. 52–65) ಹಾಗೂ ನ್ಯಾಯೋಚಿತ ವರ್ತನೆಯ ತಿಳುವಳಿಕೆಯಂತಹ ಮೂಲಭೂತ ರಾಜಕೀಯ ಆದರ್ಶಗಳ ಅಗತ್ಯವಿದೆ. ಇಂತಹ ನಾಗರಿಕ ಸದ್ಗುಣಗಳನ್ನು ಅಗತ್ಯವಾದವು ಹಾಗೂ ಅಪೇಕ್ಷಿಸಬಹುದಾದವು ಎಂದು ವಿಂಗಡಿಸುವುದು ಎಷ್ಟರಮಟ್ಟಿಗೆ ಸಾಧ್ಯ ಮತ್ತು ಹಾಗೆ ವಿಂಗಡಿಸುವುದಾದರೆ, ಅದನ್ನು ಕರಾರುವಾಕ್ಕಾಗಿ ವಿಂಗಡಿಸುವುದು ಹೇಗೆ ಎನ್ನುವುದು ಮುಂದಿನ ಪ್ರಶ್ನೆ (ಕಿಮ್ಲಿಕಾ, 1999). ಉದಾಹರಣೆಗೆ, ಭರವಸೆ ಎಂಬುದರ ಅಗತ್ಯವಿದೆಯೇ? ಹಾಗಾದರೆ ಸಭ್ಯತೆ ಹಾಗೂ ನಾಗರಿಕತೆಯ ಬಗ್ಗೆ ಏನೆಂದು ಹೇಳುವುದು? ಈ ತರಹದ ವ್ಯತ್ಯಾಸ ಮಾಡುವದರಲ್ಲಿ ಏನಾದರೂ ಅರ್ಥವಿದ್ದರೆ, ಇದು ಗರಿಷ್ಠ/ಕನಿಷ್ಠ ರೂಪದ ಪೌರತ್ವದ ಮತ್ತೊಂದು ಆಯಾಮವಾಗಬಹುದು. ಆಗ ಇದು ಶಿಕ್ಷಣದ ಪರಿಕಲ್ಪನೆಯ ಮೇಲೂ ಪರಿಣಾಮ ಬೀರುತ್ತದೆ.

**ರಾಷ್ಟ್ರೀಯತೆ ಮತ್ತು ಪೌರತ್ವ**

ರಾಜಕೀಯ ಸಮುದಾಯವೊಂದರ ಸದಸ್ಯತ್ವವನ್ನು **'ಪೌರತ್ವ'** ಎಂದು ಹೇಳುವುದಾದರೆ, ಅದೇ ತರ್ಕದ ಮೇರೆಗೆ, ತನ್ನ ಸಹವರ್ತಿ ನಾಗರಿಕರೊಂದಿಗಿನ ಸಹಕಾರದ ಭಾವನೆಗೆ ಅಡಿಪಾಯವಾವೆಂಬಂತೆ, ರಾಷ್ಟ್ರೀಯತೆಯ ಭಾವನೆಯೂ ಅಗತ್ಯವೇ? ಇತ್ತೀಚಿನ ದಿನಗಳಲ್ಲಿ ಪೌರತ್ವವನ್ನು ಸ್ಥಿರಗೊಳಿಸುವ ಸಾಮಾಜಿಕ ಏಕತೆಯು ಅಗತ್ಯ ಎನ್ನುವ ಕಾರಣಕ್ಕಾಗಿ ರಾಷ್ಟ್ರೀಯತೆಯ ಬಗೆಗಿನ ಬೆಂಬಲವನ್ನು ಪುನರುಜ್ಜೀವನಗೊಳಿಸಲಾಗಿದೆ. ಆದರೆ, ಇಂತಹ ಬೆಳವಣಿಗೆಯು; ಅತಿರೇಕದ ಅಭಿಮಾನ, ಪರಕೀಯರ ಬಗ್ಗೆ ದ್ವೇಷ, ಯುದ್ಧೋನ್ಮಾದ ಮತ್ತು ಚಾರಿತ್ರಿಕ ಸಂಗತಿಗಳನ್ನು ತರ್ಕಹೀನ ಪೌರಾಣಿಕ ಹಿನ್ನೆಲೆಯಲ್ಲಿ ಗ್ರಹಿಸುವ ಮನೋಭಾವಗಳ ಕಾರಣದಿಂದಾಗಿ, ರಾಷ್ಟ್ರೀಯತೆಯ ಚಿಂತನೆಯನ್ನೇ ಮರುಪರಿಶೀಲಿಸುವಂತೆಯೂ ಪ್ರೇರೇಪಿಸಿದೆ.

ರಾಷ್ಟ್ರೀಯತೆಯ ಭಾವನೆಯನ್ನೇ ನಾಗರಿಕತ್ವದ ತಳಹದಿಯಾಗಿ ಬೆಂಬಲಿಸುವವರು; ರಾಷ್ಟ್ರೀಯತೆ ಎಂದಾಕ್ಷಣ ಅದನ್ನು ಜನಾಂಗೀಯ ತಳಹದಿಯ ಹಾಗೂ ರಾಷ್ಟ್ರದ ಸದಸ್ಯರಲ್ಲದವರೆಡೆಗಿನ ಆಕ್ರಮಣಶೀಲ ಪೌರತ್ವದ ಮೂಲಭೂತವಾದೀ ಪರಿಕಲ್ಪನೆಗೆ ಸಮೀಕರಿಸಬಾರದು ಎಂದು ಹೇಳುತ್ತಾರೆ. ಮಿಲ್ಲರ್ (1992) ಪ್ರಕಾರ ಪೌರತ್ವ ಮತ್ತು ರಾಷ್ಟ್ರೀಯತೆ ಪರಸ್ಪರ ಪೂರಕವಾಗಿರುವಂಥವು; ನಾವೆಲ್ಲರೂ ಒಂದೇ ಸಮುದಾಯದವರು ಎಂದು ತಿಳಿಯಲು ಹಾಗೂ ಒಗ್ಗಟ್ಟಿನಿಂದ ಇರಲು ನಾಗರಿಕರಿಗೆ ಒಂದು ಸಮಾನ ರಾಷ್ಟ್ರೀಯ ಗುರುತಿನ ಅಗತ್ಯವಿದೆ. ಒಗ್ಗಟ್ಟಿನಿಂದ ಸಕ್ರಿಯ ನಾಗರಿಕರಾಗಿ ತಮ್ಮ ಜಗತ್ತನ್ನು ರೂಪಿಸಿಕೊಳ್ಳುವುದರಲ್ಲಿ ಈ ಸಮಾನ ಗುರುತು ಸಹಕಾರಿಯಾಗುತ್ತದೆ. ಇಂತಹ ರಾಷ್ಟ್ರೀಯತೆಯ ಕಲ್ಪನೆಯನ್ನು ತಾರ್ಕಿಕವಾಗಿ ಒಪ್ಪಬಹುದು. ಅಲ್ಲದೇ ರಾಷ್ಟ್ರೀಯತೆಗೆ ಕೆಟ್ಟ ಹೆಸರು ತಂದುಕೊಟ್ಟಿರುವ ಆಕ್ರಮಣಕಾರಿ

ಅಂಶಗಳನ್ನು ಇದರಿಂದ ಬೇರ್ಪಡಿಸಬಹುದು ಎನ್ನುವುದೂ ಇವರ ವಾದ (ಮಿಲ್ಲರ್, 1992, ಪು. 86). ಹಾಗೆಯೇ, ರಾಷ್ಟ್ರೀಯತೆಯ ಸಿದ್ಧಾಂತದ ಪರ ವಾದಿಸುವ ತಮೀರ್ (1993), ಒಂದು ರಾಜಕೀಯ ಸಮುದಾಯದೊಳಗೆ ಹಲವು ರಾಷ್ಟ್ರಗಳಿರಬಹುದಾದ ಬಹುತ್ವದ ಸಾಧ್ಯತೆಯನ್ನು ಗುರುತಿಸುತ್ತಾ, ಅದು ಬಹುಜನಾಂಗೀಯವಾದದ್ದೇ ಹೊರತು, ಏಕಜನಾಂಗೀಯವಲ್ಲ ಎಂದಿದ್ದಾರೆ. ಮಿಲ್ಲರ್‌ನಂತೆ ತಮೀರ್ ಸಹ ರಾಷ್ಟ್ರೀಯತೆಯ ಏಕರೂಪದ ವ್ಯಾಖ್ಯಾನವನ್ನು ಅಲ್ಲಗೆಳೆಯುತ್ತಾರೆ., ಸಾಂದರ್ಭಿಕತೆ, ಮೂಲಬೇರುಗಳ ಮಹತ್ವ ಮತ್ತು ಮಾನವೀಯ ಸಂಬಂಧಗಳ್ಳು ಮನುಷ್ಯರ ಶ್ರೇಯಸ್ಸಿಗೆ ಅಗತ್ಯ ಎಂಬುದಕ್ಕೆ ಒತ್ತುನೀಡುವ ಇವರು, (1993, ಪು..79–82). ಭಿನ್ನ ಸಂಸ್ಕೃತಿಗಳನ್ನು ಗುರುತಿಸುವ ಉದಾರವಾದಿ ತತ್ವಗಳು ಮತ್ತು ಜಾಗತಿಕವಾದ ಮಾನವ ಹಕ್ಕುಗಳ ಪರಿಕಲ್ಪನೆಗಳ ತಳಹದಿಯಲ್ಲಿ, ರಾಷ್ಟ್ರೀಯತೆಯ ಸಿದ್ಧಾಂತಗಳನ್ನು ಸಮರ್ಥಿಸುತ್ತಾರೆ. ಜಾನ್ ವೈಟ್ (1996), ರಾಷ್ಟ್ರೀಯತೆ ಎಂದಾಕ್ಷಣ ಅದು ಯಾವಾಗಲೂ ಜನಾಂಗೀಯವಾಗಿಯೇ ಇರಬೇಕು ಅಥವ ಉದಾರವಾದ ಪ್ರಜಾತಾಂತ್ರಿಕ ಆದರ್ಶಗಳಿಗೆ ವಿರುದ್ಧವಾಗಿಯೇ ಇರಬೇಕು ಎಂದೇನೂ ಅಲ್ಲ ಎಂದು ವಾದಿಸುತ್ತಾರೆ. ಒಂದು ಸಮುದಾಯದ ಜನರು ಪರಸ್ಪರ  ಗುರುತಿಸಿಕೊಳ್ಳುವ ಅಗತ್ಯವಿರುವುದರಿಂದ, "ರಾಷ್ಟ್ರೀಯ ಭಾವನೆ" ಎನ್ನುವುದು ವೈಯುಕ್ತಿಕ ಮತ್ತು ಸಾಂಸ್ಕೃತಿಕ ಗುರುತಿನ ಕಾರಣಗಳಿಗೆ ಅಪೇಕ್ಷಣಿಯವಾಗಬಹುದು" (1996, ಪುಟ.327). ಮನುಷ್ಯರ ಅಸ್ತಿತ್ವಕ್ಕೆ ಒಂದು ಚೌಕಟ್ಟಿನ ಅಗತ್ಯವಿದೆ. ಮಿಲ್ಲರ್ (1989) ಅವರನ್ನು ಅನುಸರಿಸುತ್ತಾ ವೈಟ್‌ರವರು, ನಾಗರಿಕರ ಮಧ್ಯೆ ಸಂಪನ್ಮೂಲಗಳ ಪುನರ್‌ಹಂಚಿಕೆಗೆ ರಾಷ್ಟ್ರೀಯ ಭಾವನೆಗಳು ಉತ್ತೇಜನವನ್ನೂ ನೀಡಬಹುದೆಂಬುದನ್ನು ಗಮನಿಸಿದ್ದಾರೆ.

ರಾಷ್ಟ್ರೀಯತೆ, ರಾಷ್ಟ್ರೀಯ ಗುರುತು ಅಥವಾ ರಾಷ್ಟ್ರೀಯ ಭಾವನೆಗಳ ಪ್ರತಿಪಾದಕರು; ಸಾಮಾನ್ಯವಾಗಿ ರಾಷ್ಟ್ರಗಳಲ್ಲಿನ ನಾಗರಿಕರಲ್ಲದವರರೆಡೆಗಿನ ಮೂಲಭೂತವಾದೀ, ಜನಾಂಗೀಯ ಮತ್ತು ಆಕ್ರಮಣಕಾರಿ ಭಾವನೆಗಳನ್ನು ರಾಷ್ಟ್ರೀಯತೆಯಿಂದ ಪ್ರತ್ಯೇಕಗೊಳಿಸಲು ಇಚ್ಛಿಸುತ್ತಾರಾದರೂ, ಮಿಲ್ಲರ್ ಮತ್ತು ತಮೀರ್ ವಿವರಿಸುವ ರಾಷ್ಟ್ರೀಯತೆಯ ಚಿತ್ರಣಕ್ಕೂ,  ಬಾಲ್ಕನ್ ಮತ್ತು ಸೆಂಟ್ರಲ್ ಆಫ್ರಿಕದಲ್ಲಿರುವಂತಹ ರಾಷ್ಟ್ರೀಯತೆಯ ನಿಜವಾದ ಅಭಿವ್ಯಕ್ತಿಗೂ ಹೋಲಿಸಿದಾಗ ಕಾಣುವ ವ್ಯತ್ಯಾಸಗಳು ಢಾಳಾಗಿಯೇ ಇವೆ. ಜನಾಂಗೀಯ ಹತ್ಯೆಗಳು ಮತ್ತು ಜನಾಂಗೀಯ ಶುದ್ಧೀಕರಣದಂತಹ ಅತಿರೇಕಗಳು ಇಲ್ಲದಿದ್ದ ಪಕ್ಷದಲ್ಲೂ, ಉದಾರವಾದಿ ಪ್ರಜಾತಾಂತ್ರಿಕ ಪರಂಪರೆಗಳು ಗಟ್ಟಿಯಾಗಿ ಬೇರೂರದಿರುವ ಅಥವ ಇಂತಹ ಪದ್ಧತಿಗಳು ಇಲ್ಲದಿರುವ  ಬಹುಜನಾಂಗೀಯವಾದ, ಹೊಸದಾಗಿ ಪ್ರಜಾತಾಂತ್ರಿಕ ಪೌರತ್ವಕ್ಕೆ ತೆರೆದುಕೊಳ್ಳುತ್ತಿರುವ ಹಲವಾರು ಸಮಾಜಗಳಲ್ಲಿ; ರಾಷ್ಟ್ರೀಯ ಗುರುತು ಎನ್ನುವುದು ಬಹಳ ಚಂಚಲವಾಗಿರುತ್ತದೆ. . ಈ ಪರಿಸ್ಥಿತಿಗಳಲ್ಲಿ **'ರಾಷ್ಟ್ರೀಯತೆ'** ಎನ್ನುವುದು ಸ್ವಾಯತ್ತತೆ ಮತ್ತು ಪರಸ್ಪರ ಗೌರವದ ಪ್ರಜಾತಾಂತ್ರಿಕ ಆದರ್ಶಗಳನ್ನು ದುರ್ಬಲಗೊಳಿಸುವ ಅಪಾಯವಿದೆ.

ಪೌರತ್ವವನ್ನು ಕುರಿತ ಮಿಲ್ಲರ್‌ರವರ ವಾದವು ರಾಷ್ಟ್ರೀಯ ಗುರುತಿನ ಅತ್ಯಂತ ಕನಿಷ್ಠ ರೂಪದ ತತ್ವದೊಂದಿಗೇ ಸಕ್ರಿಯ ಪೌರತ್ವದ ತತ್ವವನ್ನೂ ಒಳಗೊಂಡಿದೆ. ಆದರೆ ಜಾಗತೀಕರಣ ಹೆಚ್ಚಾದಂತೆಲ್ಲಾ ರಾಷ್ಟ್ರೀಯ ಸಮುದಾಯಗಳಿಗಿರುವ ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಸ್ಥಾನಮಾನ ಕ್ಷೀಣಿಸುತ್ತಿದೆ. ಹಾಗೆಯೇ ರಾಷ್ಟ್ರೀಯ ಸಮುದಾಯಗಳೊಳಗೆ  ಬಂಧಿತವಾದ ಸಕ್ರಿಯ ಪೌರತ್ವವನ್ನು ದಾಪುಗಾಲಿನ ಜಾಗತೀಕರಣ ಹಾಗೂ ಅಂತಾರಾಷ್ಟ್ರೀಯ ಪೌರತ್ವದ ಪರಿಕಲ್ಪನೆಗಳು ಆಪೋಶನ ತೆಗೆದುಕೊಳ್ಳುತ್ತಿವೆ. ಸಂವಾದ–ಕೇಂದ್ರಿತ ಪ್ರಜಾಪ್ರಭುತ್ವದ ಕುರಿತ ಇತ್ತೀಚಿನ ಸಂಶೋಧನೆಗಳಲ್ಲಿ ಇಂತಹ ಬೆಳವಣಿಗೆಗಳಿಂದ ಪೌರತ್ವದ ಮೇಲಾಗುವ ಪರಿಣಾಮಗಳ ಕುರಿತ ವಿವರವಾದ ಚರ್ಚೆಗಳಿವೆ.

**ಸಂವಾದಾತ್ಮಕ ಪೌರತ್ವ**

ಪ್ರಜಾತಾಂತ್ರಿಕ ಸಿದ್ಧಾಂತದಲ್ಲಿ ಹೊಸದಾಗಿ ಚರ್ಚೆಯಾಗುತ್ತಿರುವ "ಸಂವಾದಾತ್ಮಕ ಪೌರತ್ವ" ಎನ್ನುವ ಪರಿಕಲ್ಪನೆ ಪೌರತ್ವದ ಕುರಿತ ನಮ್ಮ ತಿಳುವಳಿಕೆಯನ್ನು ಆಳವಾಗಿ ಪ್ರಭಾವಿಸಬಹುದಾದಂಥದ್ದು, ಪೌರತ್ವದ ಬಳಕೆಯನ್ನು ಕುರಿತಾದ ಅದರ ಪರಿಕಲ್ಪನೆ, ಎಲ್ಲಾ ಸಮುದಾಯಗಳನ್ನೂ ಒಳಗೊಳ್ಳುವ ಅದರ ಅಂತಸ್ಸತ್ವ, ಪ್ರಜಾತಾಂತ್ರಿಕ ಪೌರತ್ವದ ಹೊಸ ನೆಲೆಗಳನ್ನು ಸೃಷ್ಟಿಸುವ ಸಾಧ್ಯತೆ ಮತ್ತು ಪೌರತ್ವದ ಹೊಸ ಮಾದರಿಗಳನ್ನು ಶೋಧಿಸುವ ಅದರ ಗುಣ, ನಮಗೆ ಪ್ರಸ್ತುತವಾಗಬಹುದು. ಪ್ರಾಚೀನ ಗ್ರೀಕರ ಪೌರತ್ವ ಪರಿಕಲ್ಪನೆಯ ಕೆಲವು ಗುಣಲಕ್ಷಣಗಳನ್ನು ಪುನಃ ಪಡೆಯುವ ಕೆಲಸಕ್ಕೂ ಅದು ಕೈಹಾಕುತ್ತದೆ. ಒಂದು ಸಾರ್ವಜನಿಕ ಸಭೆಯಲ್ಲಿ ತನ್ನ ಸಹ ನಾಗರಿಕರನ್ನು ಉದ್ದೇಶಿಸಿ ಸಂವಾದಿಸುವ ಮಾದರಿಯನ್ನು ಈ ಚಿಂತನೆಯು ಪುನಃ ಮುನ್ನೆಲೆಗೆ ತಂದಿದೆ. ಈ ಮಾದರಿಯ ಪ್ರಜಾತಾಂತ್ರಿಕ ಚಿಂತನೆಯ (ಉದಾ.ಗೆ ನೋಡಿ: ಬೆನ್‌ಹಬೀಬ್, 1996ಎ) ಮೂಲವಿರುವುದೇ ಸ್ವತಂತ್ರ ಮತ್ತು ಸಮಾನರಾದ ನಾಗರಿಕರು ಒಂದು ಗುಂಪಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂದರ್ಭದ ವಿಚಾರ ವಿನಿಮಯದಲ್ಲಿ. ಈ ಮಾದರಿಯಲ್ಲಿ ನಾಗರಿಕರು, ಪ್ರಶ್ನೆಗಳನ್ನು ಬಗೆಹರಿಸುವಲ್ಲಿನ ತಮ್ಮ ಅಭಿಪ್ರಾಯಗಳನ್ನು ಸರಿ ಎಂದು ಸ್ಥಾಪಿಸಲು ಇತರರೂ ಒಪ್ಪುವಂತಹ ಕಾರಣಗಳನ್ನು ಕೊಡಬೇಕಾದ ಜವಾಬ್ದಾರಿಯನ್ನು ಒಪ್ಪಿಕೊಳ್ಳುತ್ತಾರೆ. ಸಂವಾದರೂಪೀ ಪ್ರಜಾತಾಂತ್ರಿಕತೆಯ ತತ್ವದ ಪ್ರಕಾರ ನಾಗರಿಕರು ನಿರ್ಣಯಗಳಿಗೆ ಬದ್ಧರಾಗಿರಬೇಕು ಎಂದಾದಲ್ಲಿ, ಆ ನಿರ್ಣಯಗಳು ಎಲ್ಲರೂ ಸಿಂಧುವೆಂದು ಒಪ್ಪಿಕೊಳ್ಳಬಹುದಾದ ಚಿಂತನೆಯ ಮೇಲೆ ಆಧಾರಿತವಾಗಿರತಕ್ಕದ್ದು. (ಥಾಮ್ಸನ್, 1999, ಪುಟ. 120).

ಮಾತುಕತೆಯ ಮಾದರಿಯ ಸಂವಾದಾತ್ಮಕ ಪ್ರಜಾಪ್ರಭುತ್ವವು, ಪೌರತ್ವವನ್ನು ಮತ್ತಷ್ಟು ಸಮ್ಮಿಳಿತಗೊಳಿಸುವ ಮಾರ್ಗಗಳನ್ನು ಪ್ರಸ್ತಾಪಿಸುತ್ತದೆ. ಯಂಗ್‌ರವರ (1996) ಪ್ರಕಾರ ಇಂತಹ ಸಂವಾದ–ಕೇಂದ್ರಿತ ಸಿದ್ಧಾಂತಗಳು, ಕಾರಣಗಳನ್ನು ಕೊಡುವ ಮತ್ತು ಅದನ್ನು ಅತ್ಯುತ್ತಮವಾದ ತರ್ಕದ ಆಧಾರದ ಮೇಲೆ ಒಪ್ಪಿಕೊಳ್ಳುವ ಪ್ರಕ್ರಿಯೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳುವುದರಿಂದ, ಕೇವಲ ಒಂದು ವರ್ಗದ ಜನರಿಗೆ ಅಂದರೆ ಇಂತಹ ಕಾರಣಗಳನ್ನು ಕೊಡುವಲ್ಲಿ ನಿಷ್ಣಾತರಾದ ಕೆಲವರಿಗೆ ಮಾತ್ರವೇ ಸಹಾಯಮಾಡಿ, ವಿಮರ್ಶಾತ್ಮಕ ವಾದವನ್ನು ಮಂಡಿಸುವ ಕ್ಷಮತೆ ಅಥವಾ ಆತ್ಮವಿಶ್ವಾಸವಿಲ್ಲದ ಜನರನ್ನು ಉದಾಹರಣೆಗೆ; ಕೆಲವು ಮಹಿಳೆಯರು, ಅಲ್ಪಸಂಖ್ಯಾತರು ಮತ್ತು ಪಶ್ಚಿಮೇತರ ಸಂಸ್ಕೃತಿಯವರನ್ನು ಹೊರಗಿಡುತ್ತದೆ. ಹಾಗಾಗಿ ಯಂಗ್ ಪ್ರತಿಪಾದಿಸುವ ಮಾತುಕತೆ ಮಾದರಿಯ ಸಂವಾದದಲ್ಲಿ ವಾದ ಮತ್ತು ತರ್ಕದ ಬದಲಿಗೆ ಹೆಚ್ಚು

ಆತ್ಮೀಯವಾದ, ಭಾವನಾತ್ಮಕವಾದ ಮಾತುಕತೆಗೆ ಅವಕಾಶವಿರುತ್ತದೆ. ಹಾಗಾದಾಗ, ಸಾರ್ವಜನಿಕ ಸಂವಾದದಿಂದ ಹೊರಗುಳಿದಿದ್ದವರಿಗೂ ಮಾತನಾಡುವ ಅವಕಾಶ ಸಿಕ್ಕಂತಾಗುತ್ತದೆ. ಇಲ್ಲಿ ಜನರ ನಡುವಿನ ಭಿನ್ನತೆಯನ್ನೇ ಪ್ರಜಾತಾಂತ್ರಿಕ ಒಪ್ಪಂದವನ್ನು ತಲುಪಲು ಒಂದು ಸಂಪನ್ಮೂಲವಾಗಿ ಬಳಸಿಕೊಳ್ಳಬಹುದು. ಸಾಧಾರಣ ಚರ್ಚೆಗಳೇ ಅಲ್ಲದೇ ಕತೆ ಮುಂತಾದ ಇತರೆ ಪ್ರಕಾರಗಳ ಮೂಲಕವೂ ನಾಗರಿಕರ ನಡುವಿನ ಸಂವಾದವನ್ನು ಬೆಳೆಸುವ ಸಾಧ್ಯತೆ ಇಲ್ಲಿದೆ.

ಪ್ರಾಚೀನ ಗ್ರೀಸ್‌ನಲ್ಲಿದ್ದಂತೆ, ಸಂವಾದದಲ್ಲಿ ಪಾಲ್ಗೊಳ್ಳುವ ಎಲ್ಲಾ ನಾಗರಿಕರು ಗುಂಪುಗೂಡುವುದು ಈ ಆಧುನಿಕ ಕಾಲದಲ್ಲಿ ಸಾಧ್ಯವಿಲ್ಲ. ಅದರ ಬದಲಾಗಿ, ಸಂವಾದವನ್ನು ಸಾಧ್ಯವಾಗಿಸುವ ಹಲವಾರು ಸಂದರ್ಭಗಳನ್ನು ಗುರುತಿಸುವ ಕೆಲಸವನ್ನು ಈ ರೀತಿಯ ಸಂವಾದ–ಕೇಂದ್ರಿತ ಸಿದ್ಧಾಂತದ ಪ್ರತಿಪಾದಕರು ಮಾಡಿದ್ದಾರೆ. ಇವು, "ನಾಗರಿಕರು ಒಟ್ಟಾಗಿ ಸೇರುವ ಹಲವಾರು ಬಗೆಗಳು" (ಬೆನ್ ಹಬೀಬ್, 1996ಎ, ಪು. 73). ಅಂದರೆ, ನಾಗರಿಕ ಸಮಾಜಲ್ಲಿರುವ ವಿವಿಧ ಸಂಘಟನೆ ಹಾಗೂ ಸಂಸ್ಥೆಗಳು.ಉದಾಹರಣೆಗೆ; ರಾಜಕೀಯ ಪಕ್ಷಗಳು, ಒತ್ತಾಯದ ಗುಂಪುಗಳು, ಸಾಮಾಜಿಕ ಆಂದೋಲನಗಳು, ಸ್ವಯಂ ಸೇವಾ ಸಂಘಗಳು, ಕಾರ್ಮಿಕ ಸಂಘಟನೆಗಳು ಮತ್ತು  ಶೈಕ್ಷಣಿಕ ಸಂಸ್ಥೆಗಳು. ಇದರ ಜೊತೆಗೇ, ಅಧಿಕೃತ ರಾಜಕೀಯ ಸಂಸ್ಥೆಗಳ ನಿರ್ವಹಣೆ  ಮತ್ತು ಅವುಗಳೊಡನೆ ನಾಗರಿಕರಿಗಿರುವ ಸಂಬಂಧದಗಳಲ್ಲೂ ಸಂವಾದದ ಲಕ್ಷಣವಿರಬಹುದು.

"ಪ್ರಜಾಸತ್ತೆಯ ಇನ್ನಾವುದೇ ಪರಿಕಲ್ಪನೆಗಳಿಗಿಂತ ಪ್ರಾತಿನಿಧ್ಯದ ಸವಾಲುಗಳಿಗೆ ಸಂವಾದದ ಸಂಪನ್ಮೂಲಗಳು ಹೆಚ್ಚು ಸಮರ್ಥನೀಯ ಸ್ಪಂದನದ ಮಾರ್ಗಗಳನ್ನು ಒದಗಿಸುತ್ತವೆ" ಎಂದು ಗುಟ್‌ಮನ್ ಮತ್ತು ಥಾಮ್ಸನ್ ವಾದಿಸುತ್ತಾರೆ (1996. ಪು. 132). ಸಂವಾದದ ಪ್ರಜಾಸತ್ತೆಯಲ್ಲಿ ಪ್ರತಿನಿಧಿಗಳು ತಮ್ಮ ಕ್ರಿಯೆ ಮತ್ತು ನೀತಿ ನಿರೂಪಣೆಗಳಿಗೆ ನೈತಿಕ ಸಮರ್ಥನೆ ನೀಡಬೇಕಾಗುತ್ತದಲ್ಲದೆ, ಇದರ ಪರಿಣಾಮಗಳಿಗೆ ಗ್ರಸ್ತರಾದವರು ಒಪ್ಪಬಹುದಾದಂತಹ ಕಾರಣಗಳನ್ನು ನೀಡಬೇಕಾಗುತ್ತದೆ. ಆದ್ದರಿಂದಲೇ ಪ್ರತಿನಿಧಿಗಳು ಮಂಡಿಸುವ ಪ್ರಸ್ತಾವಗಳಿಗೆ ನಾಗರಿಕರು ಪ್ರತಿಕ್ರಿಯಿಸುತ್ತಾರಲ್ಲದೆ; ಜನಪ್ರತಿನಿಧಿಗಳು ಅದಕ್ಕೆ ಸಂವಾದಿಯಾದ ಪ್ರತಿಸ್ಪಂದನೆಯನ್ನು ನೀಡುತ್ತಾರೆ. ಈ ನಿರಂತರ ಸಂವಾದದ ವಿನಿಮಯದಲ್ಲಿ, ಪ್ರಾತಿನಿಧಿಕ ಸರ್ಕಾರವೊಂದು ಚರ್ಚೆಯನ್ನು ಪುನರಾವರ್ತಿಸುವುದು ಅವಶ್ಯ. .ಹೀಗೆ, ನಾಗರಿಕರಿಗೆ ಸಂವಹನದ ಅವಕಾಶಗಳನ್ನು ನೀಡುತ್ತಾ, ಜನಪ್ರತಿನಿಧಿಗಳು ಪ್ರಜಾಸತ್ತೆಯನ್ನು ಇನ್ನಷ್ಟು ಮೇಲ್ಮಟ್ಟಕ್ಕೆ ಎತ್ತರಿಸಬಹುದು. ಹೆಚ್ಚು ಸಂವಾದಾತ್ಮಕವಾಗಿ ರೂಪುಗೊಳ್ಳುವ ಮೂಲಕ ಪ್ರಾತಿನಿಧ್ಯವೂ ಮೇಲ್ಮಟ್ಟಕ್ಕೆ ಏರುತ್ತದೆ. ಸಾರ್ವಜನಿಕ ಜನ ಸೇವಕರು ತಮ್ಮನ್ನು ಆರಿಸಿದವರಿಗಷ್ಟೇ ಅಲ್ಲದೆ, ತಮ್ಮ ನೈತಿಕ ಕ್ಷೇತ್ರಗಳಿಗೂ (ಥಾಮ್ಸನ್, 1999, ಪು. 120) ಅಂದರೆ, ತಮ್ಮ ನಿರ್ಧಾರಗಳಿಂದ ಗ್ರಸ್ತರಾದವರಿಗೂ ಉತ್ತರದಾಯಿತ್ವವನ್ನು ಹೊಂದಿರುತ್ತಾರೆ.

ವಿಸ್ತೃತ ಸಾರ್ವಜನಿಕ ಭಾಗೀದಾರಿಕೆಯ ಮೂಲಕ ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಗತ್ಯವನ್ನು ಸ್ವಾಗತಿಸುವ ಬದಲು, ಆಧುನಿಕ ಪ್ರಜಾಪ್ರಭುತ್ವದ ಸರ್ಕಾರಗಳು ಇದನ್ನು, ತಮ್ಮ ಅಧಿಕಾರವನ್ನು ಪ್ರಶ್ನಿಸುವ ಸಾಧ್ಯತೆ ಎಂಬುದಾಗಿ ಗ್ರಹಿಸುತ್ತಾರೆ. ಬಹಳಷ್ಟು ಬಾರಿ, ನಾಗರಿಕರೂ ಸಹ, ತಜ್ಞರ ಹೇಳಿಕೆಗಳಿಗೆ ಗಮನವಿತ್ತು, ನಿಷ್ಕರ್ಷೆಮಾಡುವ ಸಾರ್ವಜನಿಕರನ್ನು ಅವಲಂಬಿಸಿ,ತಾವೇ ಸ್ವತಃ  ತೀರ್ಪುನೀಡುವುದನ್ನು ಸ್ವಲ್ಪ ಕಾಲ ತಡೆಹಿಡಿಯುತ್ತಾರೆ.(ವಾರೆನ್, 1996) ಈ ಪಾತ್ರವನ್ನು ಹಲವಾರು ಒತ್ತಡ ಗುಂಪುಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ಮಾಧ್ಯಮಗಳು ನಿರ್ವಹಿಸುತ್ತವೆ. ಆದರೆ ಈ ರೀತಿಯ ಸಂವಾದಪೂರ್ಣ ಪ್ರಜಾಸತ್ತೆಗಳು ಸಮಸ್ತ ನಾಗರಿಕರ ಸಂವಾದದ ಮೂಲಕವೇ ಎಲ್ಲಾ ನಿರ್ಧಾರಗಳನ್ನು ಕೈಗೊಳ್ಳಬೇಕೆಂಬ ಗ್ರಹಿಕೆಗೆ ' ಅವಲಂಬಿತವಾಗಿರುವುದಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಅದು, ನಾಗರಿಕರು  ತಮಗೆ ಯಾವುದು ಮುಖ್ಯವೊ, ಯಾವುದರಲ್ಲಿ ತಮಗೆ ತಜ್ಞತೆ ಇದೆಯೋ ಅಂತಹ ವಿಷಯಗಳೆಡೆಗೆ  ಲಕ್ಷ್ಯವಹಿಸಿ, ತಮ್ಮ ತೀರ್ಪನ್ನು ಸ್ವಲ್ಪ ಕಾಲ ಮುಂದೂಡುವಂತೆ ಮಾಡುತ್ತದೆ.

**ಕಾಸ್ಮೋಪಾಲಿಟನ್ ನಾಗರಿಕತ್ವ?**

ನಾಗರಿಕರ ನಡುವಿನ ಈ ಸಂವಹನಗಳು ರಾಷ್ಟ್ರ–ರಾಜ್ಯಗಳ ಪ್ರತ್ಯೇಕತೆಗಷ್ಟೇ ಸೀಮಿತವಾಗಿಲ್ಲ; ಯಾವುದೇ ನಿರ್ಧಾರದಿಂದ ಗ್ರಸ್ತರಾದವರಿಗೂ ಇವು ಮುಕ್ತವಾಗಿರುತ್ತವೆ ಎಂದು ಈ ಸಂವಾದಾತ್ಮಕ ಪ್ರಜಾಸತ್ತೆಯ ಕೆಲವು ವ್ಯಾಖ್ಯೆಗಳು ಅಭಿಪ್ರಾಯಪಡುತ್ತವೆ (ಉದಾ: ಬೆನ್ ಹಬೀಬ್, 1996ಎ; ಬೊಹ್ಮನ್, 1997, 1998). ಪ್ರಜಾಸತ್ತಾತ್ಮಕ ನಾಗರಿಕತ್ವ ಎಂಬುದು ಸಾಮಾನ್ಯವಾಗಿ ಸರ್ವತಂತ್ರ ಸ್ವತಂತ್ರ ಭೌಗೋಳಿಕ ಗಡಿರೇಖೆಗಳ ರಾಜ್ಯದಲ್ಲೇ ಚಾಲ್ತಿಯಲ್ಲಿರುತ್ತದೆ. ಆದರೆ ಜಾಗತೀಕರಣಗೊಂಡ ಸ್ಥಿತಿಯಲ್ಲಿ ಸಂವಾದವು ಹಳೆಯ ಗಡಿಗಳಾಚೆ ಕಾಲಿಡುತ್ತದೆ. (ನೋಡಿ: ಡ್ರಯಜೆಕ್ 1999) ನಿರ್ದಿಷ್ಟ ರಾಷ್ಟ್ರಗಳಲ್ಲಿ ಕೈಗೊಂಡ ನಿರ್ಧಾರಗಳು ಅವುಗಳ ಗಡಿಯಾಚೆಗೂ ಪರಿಣಾಮ ಬೀರುತ್ತಿರುವುದು ಹೆಚ್ಚುತ್ತಿದೆಯಲ್ಲದೆ, ಸಂವಹನದ ಬೆಳವಣಿಗೆಯು ಗಡಿರೇಖೆಗಳಾಚೆಗಿನ ಸಂವಾದವನ್ನು ಸುಲಭಗೊಳಿಸಿದು; ಈ ಮೂಲಕ, ನಾಗರಿಕತ್ವ ಹಾಗೂ ಅದರ ಬಳಕೆಯ ಹೊಸ ಚೌಕಟ್ಟು ಹೊರಹೊಮ್ಮುತ್ತಿದೆ.

ರಾಷ್ಟ್ರೀಯ ಗಡಿರೇಖೆಗಳು ಮಸುಕಾಗುತ್ತಿರುವ  ಸಂದರ್ಭದಲ್ಲಿನ ಸಾಂಸ್ಥಿಕ ಪರಿಣಾಮಗಳು ಹಾಗೂ ಜಾಗತೀಕರಣದ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಪ್ರಜಾಸತ್ತೆಯ ಹೊಸ ರೂಪ ಹಾಗೂತಾಣಗಳನ್ನು ಪ್ರೋತ್ಸಾಹಿಸಲು ಸಂವಾದಕ್ಕಿರುವ ಸಾಮರ್ಥ್ಯದ ಬಗ್ಗೆ ಸಂವಾದ ತತ್ವದ ತಾತ್ವಿಕರ ಊಹೆಗಳು ವಿವಿಧ ದಿಕ್ಕುಗಳಿಗೆ ಹೊರಳಿವೆ. ಒಬ್ಬರ ಪ್ರಕಾರ ಈಗಿರುವ ಆಯಾ ರಾಷ್ಟ್ರಗಳ ಜನಪ್ರತಿನಿಧಿಗಳ ನೈತಿಕ ಕ್ಷೇತ್ರಗಳು ಭೌಗೋಳಿಕ ಗಡಿಗಳಾಚೆಯೂ ಚಾಚುತ್ತವೆ. ಏಕೆಂದರೆ ಆಯಾ ರಾಷ್ಟ್ರಗಳು ತೆಗೆದುಕೊಳ್ಳುವ ನಿರ್ಧಾರಗಳು, ಸದರಿ ರಾಷ್ಟ್ರದ ನಾಗರಿಕರಲ್ಲದ ಇತರರ ಮೇಲೂ ಪರಿಣಾಮ ಬೀರುತ್ತವೆ. ಉದಾ: ವಲಸೆ, ವ್ಯಾಪಾರ, ಪರಿಸರ ಸಂಬಂಧಿತ ನೀತಿಗಳು. ಆದರೆ ಈ ನೀತಿಗಳಿಂದ ಗ್ರಸ್ತರಾದವರೆಲ್ಲರೂ ರಾಜ್ಯದ ನಿರ್ಧಾರದ ಪ್ರಕ್ರಿಯೆಯಲ್ಲಿ ಭಾಗವಹಿಸುವಂತಾಗಬೇಕು ಎಂಬ ಮಟ್ಟಕ್ಕೆ ಈ ಚಿಂತಕರು ವಾದಿಸುವುದಿಲ್ಲ. (ಥಾಮ್ಸನ್, 1999, ಪು. 120)

ಹೋರಾಟ ಹಾಗೂ ಚಳುವಳಿಗಳ ಮೂಲಕ, ಮತ್ತೂ ಸ್ಪಷ್ಟವಾಗಿ ಹೇಳಬೇಕೆಂದರೆ; ತಿಮಿಂಗಿಲ ಬೇಟೆ ಮತ್ತು ಜೈವಿಕ ಕಳ್ಳತನಗಳ ವಿರುದ್ಧದ ಪರಿಸರ ಸಂಬಂಧಿ ಆಂದೋಳನಗಳಲ್ಲಿ ಅಂತರ್ರಾಷ್ಟ್ರೀಯ ನಾಗರಿಕ ಸಮಾಜದ ಬೆಳವಣಿಗೆಯಾಗುತ್ತಿದೆ. ಇದು; ಕಾಸ್ಮೋಪಾಲಿಟನ್ ಸಂವಹನವು, ಪ್ರಜಾಸತ್ತಾತ್ಮಕ ಸಂವಹನಕ್ಕೆ ಸೃಷ್ಟಿಸಿದ ನೂತನ ಸದವಕಾಶಗಳ ಮತ್ತೊಂದು ಮಾರ್ಗವೂ ಹೌದು (ಡ್ರಯಜೆಕ್, 1999). ಇತ್ತೀಚೆಗೆ ಗೋಚರವಾಗುತ್ತಿರುವ  ಈ ಅಂತರ್ರಾಷ್ಟ್ರಿಯ ನಾಗರಿಕ ಸಮಾಜದಲ್ಲಿ ಕಾಸ್ಮೋಪಾಲಿಟನ್ ನಾಗರಿಕರು, ಪ್ರಜಾಸತ್ತೆಯನ್ನು ವಿಸ್ತರಿಸಲು ಮಾನವ ಹಕ್ಕುಗಳ ಪ್ರಚಾರಕರ ರೀತಿಯಲ್ಲಿ, ಸಂಘ ಸಂಸ್ಥೆಗಳ ನಡುವಿನ ಸಂವಹನ ಜಾಲವನ್ನು ಬಳಸುತ್ತಿದ್ದಾರೆ. ಪ್ರಚಾರದ ಮೂಲಕ ಮಾನವಹಕ್ಕುಗಳನ್ನು ವಿಸ್ತರಿಸಿದಂತೆ, ಈ ನಾಗರಿಕರು ನಾಗರಿಕ ಹಕ್ಕುಗಳನ್ನೂ ವಿಸ್ತರಿಸುತ್ತಿದ್ದಾರೆ. ಸದ್ಯ ಚಾಲ್ತಿಯಲ್ಲಿರುವ ರಾಜಕೀಯ ಸಂಸ್ಥೆಗಳ ಸ್ವರೂಪ, ಸಂಘಟನೆ ಮತ್ತು ಚಟುವಟಿಕೆಗಳನ್ನು ಪ್ರಭಾವಿಸುವ ಶಕ್ತಿ ಇದಕ್ಕಿದೆ (ಬೊಹ್ಮನ್ 1997, ಪು. 180). ಆದರೆ ಈ ಕಾಸ್ಮೋಪಾಲಿಟನ್ ಜಾಲಬಂಧಗಳು (ನೆಟ್‌ವರ್ಕ್) ತನ್ನೊಳಗೆ ಪ್ರವೇಶ ಇರುವವರಿಗೆ, ಗ್ರಸ್ತರಿಗೆ ಒಪ್ಪಿಗೆಯಾಗುವಂಥಾ ಸಾರ್ವಜನಿಕ ದೂರಗಾಮಿ ಧ್ಯೇಯಗಳಿಗೆ ಸಹಾಯಮಾಡುತ್ತಿದ್ದರೂ, ಈ ಮೂಲಕ ಜಾಗತಿಕ ಮಟ್ಟದ ಪ್ರಭುತ್ವವೊಂದರ ವಿಶ್ವ ಸರ್ಕಾರ ಹೊರಹೊಮ್ಮುವ ಸಾಧ್ಯತೆ ಬಗ್ಗೆ ಈ ಸಂವಾದ ತತ್ವದ ತತ್ವಜ್ಞರೂ ಏನೂ ಹೇಳುತ್ತಿಲ್ಲ (ಬೊಹ್ಮನ್, 1997). ನಿಜ, ನಾಗರಿಕ ಸಮಾಜಗಳಲ್ಲಿನ ಸಂಘಟನೆಗಳ ನಿರ್ದಿಷ್ಟ ಗುರಿಗಳನ್ನು ಮುಂದುವರಿಸುವ ಹಿತಾಸಕ್ತಿಯ ದೃಷ್ಟಿಯಿಂದ;  ಸಾಮೂಹಿಕ ಒಳಿತಿನ ನಿರ್ಧಾರಗಳನ್ನು ಪ್ರೋತ್ಸಾಹಿಸುವ ರಾಷ್ಟ್ರೀಯ ಹಾಗೂ ಸ್ಥಳೀಯ ಸರ್ಕಾರಗಳ ಪಾತ್ರವನ್ನು ನಿರ್ಲಕ್ಷಿಸುವಷ್ಟರ ಮಟ್ಟಿಗೆ ಅಂತರ್ರಾಷ್ಟ್ರೀಯ ನಾಗರಿಕ ಸಮಾಜದ ಪ್ರಭಾವವನ್ನು ಅತಿರಂಜಿಸಬಾರದು (ಥಾಮ್ಸನ್ 1999. ಪು. 116–17). 1990ರ ದಶಕ, ಅಂತರ್ರಾಷ್ಟ್ರೀಯ ಮಾನವ ಹಕ್ಕುಗಳ ಸಂಸ್ಕೃತಿಯ ಉದಯಕ್ಕೆ ಸಾಕ್ಷಿಯಾಯಿತು. ಆದರೂ ಈ ಮಾನವ ಹಕ್ಕುಗಳನ್ನು, ಅಂತರ್ರಾಷ್ಟ್ರೀಯ ನಾಗರಿಕರು ಗುರುತಿಸಿ, ಗೌರವಿಸಬೇಕೆನ್ನುವ ನಿಟ್ಟಿನ ಚಳವಳಿಯ ಲಕ್ಷ್ಯ ಈಗ ಚಾಲ್ತಿಯಲ್ಲಿರುವ ರಾಷ್ಟ್ರಗಳ ಸರ್ಕಾರಗಳ ಮೇಲೆಯೇ ಇದೆ.

ಪೌರತ್ವವನ್ನು ವಿಸ್ತರಿಸುವ ನಿಟ್ಟಿನ ಈ ಸಂವಾದಾತ್ಮಕ ಪ್ರಜಾಸತ್ತೆಯ ಸಾಮರ್ಥ್ಯದ ಹೊರತಾಗಿಯೂ ಈ ನಾಗರಿಕತ್ವವು ಹೊಸ ಪ್ರಜಾಸತ್ತಾತ್ಮಕ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವ ಅಗತ್ಯವಿದೆ. ಆ ಲಕ್ಷಣಗಳನ್ನು ಅದು ತೋರುತ್ತಲೂ ಇದೆ.. ಇತರರೊಂದಿಗಿನ  ವಾದಮಂಡನೆಯ ಸಂವಾದಾತ್ಮಕ ಕೌಶಲ್ಯ ಮತ್ತು ಯಾವ ವಾದ ಸಶಕ್ತವಾಗಿದೆಕ್ತ ಎಂದು ನಿಷ್ಕರ್ಷಿಸುವ ಶಕ್ತಿಯನ್ನು ಸಾದರಪಡಿಸುವುದರ ಜೊತೆಗೆ ಈ ಸಂವಾದದ ಮೂಲಕ  ಪರಸ್ಪರ ಸಂವಹನ ವಿನಿಮಯದ ಚಾತುರ್ಯವನ್ನು ಸಹ ನಿರೀಕ್ಷಿಸಲಾಗುತ್ತದೆ. ಎಲ್ಲರನ್ನೂ ಮುಕ್ತ ಸಂವಾದದ ಸಮಾನ ಭಾಗೀದಾರರರೆಂದು ಗುರುತಿಸುವ ಮನೋಧರ್ಮದ ಅಗತ್ಯವಿದೆ. ಈ ಸಂವಾದಕರು, ಯಾವುದೋ ಹಿತಾಸಕ್ತಿಯ ಹೊರೆ ಹೊತ್ತವರಂತೆ ವರ್ತಿಸದೇ, ಭಿನ್ನ ಸ್ಥಿತಿಯಲ್ಲಿರುವವರು ಮತ್ತು ವಿಭಿನ್ನ ಶೈಲಿಯ ಮಾತುಗಾರರ ನ್ಯಾಯಯುತ ಬೇಡಿಕೆಗಳನ್ನು ಗುರುತಿಸುವಂತಿರಬೇಕು. ಭಿನ್ನ ಬೇಡಿಕೆಗಳ ಸಂವಹನದ ಬದ್ಧತೆ ಕೂಡಾ ಇಲ್ಲಿ ಮುಖ್ಯ. ವಿಸ್ತೃತ ಸಾರ್ವಜನಿಕ ಕ್ಷೇತ್ರವನ್ನೊಳಗೊಂಡ ಸಂವಹನದಲ್ಲಿ ಭಾಗವಹಿಸುವ ನಾಗರಿಕರು; ಚರ್ಚಿತ ವಿಷಯಗಳ ಬಗ್ಗೆ ಮಾಹಿತಿಯನ್ನು ಪಡೆದವರಾಗಿದ್ದು, ಅವುಗಳ ಆಗುಹೋಗುಗಳನ್ನು ಜಾಗರೂಕತೆಯಿಂದ ಅನುಸರಿಸುತ್ತಾ, ತಮ್ಮ ತೀರ್ಮಾನಗಳನ್ನು ಯಾವಾಗ ಕಾದಿರಿಸಬೇಕು ಯಾವಾಗ ಕಾದಿರಿಸಬಾರದು ಎಂಬುದರ ಬಗ್ಗೆ ಅರಿವನ್ನು ಹೊಂದಿರಬೇಕು.ಈ ಸಂವಾದವು ವಿದ್ಯುನ್ಮಾನ ಮಾದ್ಯಮಗಳಲ್ಲಿ ಹೆಚ್ಚುತ್ತಿದ್ದಂತೆ, ನಾಗರಿಕರು ಮಾಹಿತಿ ಸಂವಹನ ತಂತ್ರಜ್ಞಾನದ ಬಳಕೆಯನ್ನು ಕಲಿಯಬೇಕಷ್ಟೇ ಅಲ್ಲ; ಅದರ ಮೂಲಕ ಕ್ರಿಯಾಶೀಲರೂ ಆಗಬೇಕು. ಈ ಸಂಕೀರ್ಣ ಹಾಗೂ ಬೇಡಿಕೆಯನ್ನುಳ್ಳ ವಿಸ್ತೃತ ಕೌಶಲ್ಯಗಳು ಸೂಚಿಸುವುದೆಂದರೆ: ನಾಗರಿಕತ್ವವು ಅತೀ ಹೆಚ್ಚು ಮಾಹಿತಿಯುಕ್ತವಾಗಿದ್ದಾಗ್ಯೂ,  ಹೆಚ್ಚಿನ ವೇಳೆ ಕನಿಷ್ಠ ಕ್ರಿಯಾಶೀಲವಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ಕ್ರಿಯಾಶೀಲ ಮತ್ತು ನಿಷ್ಕ್ರಿಯ ನಾಗರಿಕತ್ವ ಎಂಬ ಸರಳೀಕೃತ ವ್ಯತ್ಯಾಸವು ಉಪಯೋಗಕೆ ಬಾರದು. 'ಕನಿಷ್ಠ– ಗರಿಷ್ಠ' ನಾಗರಿಕತ್ವ ಎಂಬ ಸೂಕ್ಷ್ಮ ವ್ಯತ್ಯಾಸವನ್ನು ಇನ್ನಷ್ಟು ಸ್ಪಷ್ಟವಾಗಿ ವಿಶದೀಕರಿಸಬೇಕಿದೆ.

ಭಾಗವಹಿಸುವಿಕೆ ಮತ್ತು ಪ್ರಾತಿನಿಧ್ಯ ಎಂಬ ಗ್ರಹಿಕೆಗಳ ನಡುವಿನ ವ್ಯತ್ಯಾಸವನ್ನು ಕುರಿತಂತೆ, ಸಂವಾದಾತ್ಮಕ ಪ್ರಜಾಸತ್ತೆಯು ವಿಭಿನ್ನ  ಬೆಳಕನ್ನು ಚೆಲ್ಲುತ್ತದೆ. ಇದನ್ನು ನಾವು ಎಷ್ಟೋ ಬಾರಿ ಗರಿಷ್ಠ–ಕನಿಷ್ಠ ನಾಗರಿಕತ್ವದ ಜೊತೆ ಸಮೀಕರಿಸುವುದಿದೆ. ಒಂದು ಮಾದರಿ ಪ್ರಜಾಸತ್ತೆಯು ಇವೆರಡನ್ನೂ ಒಳಗೊಳ್ಳುತ್ತದೆ. ಅಂದರೆ, ಸಂವಾದವು ಸಾಧ್ಯವಿರುವಲ್ಲಿ ನಾಗರಿಕನನ್ನು ಒಳಗೊಳ್ಳುತ್ತಾ, ಪ್ರಾತಿನಿಧ್ಯವನ್ನು ಹೆಚ್ಚು ಸಂವಾದಾತ್ಮಕವಾಗಿ ಮಾಡುವ ಪ್ರಕ್ರಿಯೆ ಇದು. ಪ್ರಜಾಸತ್ತಾತ್ಮಕ ವಿಚಕ್ಷಣೆ ಎರಡೂ ರೀತಿಯ ಚಟುವಟಿಕೆಗಳಲ್ಲಿ ಸಾಧ್ಯ. ಆದರೆ ರಾಷ್ಟ್ರಾತೀತ ಸಂವಾದವು ಪ್ರಜಾಸತ್ತಾತ್ಮಕ ನಾಗರಿಕತ್ವಕ್ಕೆ ಹೊಸ ಆಯಾಮ ನೀಡಿದರೂ, ಭಾಗವಹಿಸುವಿಕೆ ಮತ್ತು ಪ್ರಾತಿನಿಧ್ಯದ ವಿಚಾರದಲ್ಲಿ ಸಮಸ್ಯೆಗಳನ್ನು ಒಡ್ಡುತ್ತದೆ. ಸ್ಥಳೀಯ ಸಣ್ಣಪುಟ್ಟ ಸಂದರ್ಭಗಳಲ್ಲಿ ನಾಗರಿಕರ ಸಂವಾದಾತ್ಮಕ ಭಾಗವಹಿಸುವಿಕೆ ಸೀಮಿತವಾಗಿರಬಹುದು. ರಾಷ್ಟ್ರಗಳ ಗಡಿ ಸೀಮೆ ದಾಟಿದ ಚುನಾಯಿತ ಸರ್ಕಾರ ಇಲ್ಲದಿರುವಾಗ ಈ ನಾಗರಿಕರ ಹಿತಾಸಕ್ತಿಗಳನ್ನು ಯಾರು ಪ್ರತಿನಿಧಿಸುತ್ತಾರೆ? ನಾಗರಿಕರ ನಡುವಿನ ಸಂವಾದವನ್ನು ಸಂಘಟಿಸುವಲ್ಲಿ ಪ್ರಾದೇಶಿಕ ಭೌಗೋಳಿಕ ವ್ಯಾಪ್ತಿಯ ಪ್ರಾಮುಖ್ಯತೆ ಕಡಿಮೆಯಾದಂತೆ, ಪ್ರಜಾಸತ್ತಾತ್ಮಕ ಪ್ರಾತಿನಿಧ್ಯದ ಪಾರಂಪರಿಕ ಪರಿಕಲ್ಪನೆಗಳೂ ಅಸಂಗತವಾಗಬಹುದು. (ರೋಸೆನೋ (1998, ಪು. 40). ಆದ್ದರಿಂದ ಪ್ರಾತಿನಿಧ್ಯ ಮತ್ತು ಉತ್ತರದಾಯಿತ್ವದ ಹೊಸ ಕಾರ್ಯ ಯೋಜನೆಗಳು ಹೇಗೆ ಹೊಮ್ಮುತ್ತವೆ ಎಂಬುದನ್ನು ಕಾದು ನೋಡಬೇಕಷ್ಟೇ.

ಸಂವಾದಶೀಲ ವಾತಾವರಣವನ್ನು ರಾಷ್ಟ್ರಾತೀತವಾಗಿ ವಿಸ್ತರಿಸುವ ಮೂಲಕ ಪ್ರಜಾಸತ್ತಾತ್ಮಕ ನಾಗರಿಕತ್ವವನ್ನು ವರ್ಧಿಸಬಹುದು ಎಂಬ ಮೊದ್ದು ಆಶಾಭಾವನೆಯ ಬಗ್ಗೆ ಈ ವಿಶ್ಲೇಷಣೆಗಳು ಎಚ್ಚರಿಸುತ್ತವೆ. ಜಾಗತೀಕರಣದ ಒಂದು ನೇತ್ಯಾತ್ಮಕ ಪರಿಣಾಮವೆಂದರೆ; ರಾಜಕೀಯವು ರಾಷ್ಟ್ರೀಯ ಎಲ್ಲೆಗಳನ್ನು ದಾಟಿರುತ್ತದಾದರೂ; ನಾಗರಿಕತ್ವದ  ಹಕ್ಕು, ಸವಲತ್ತುಗಳನ್ನು ಚಲಾಯಿಸುವ ನಿರ್ದಿಷ್ಟ ತಾಣಗಳೇ ಇರುವುದಿಲ್ಲ. (ಬೊಹ್ಮನ್ 1998, ಪು. 200) ಅಂತರ್ರಾಷ್ಟ್ರೀಯ ಮಟ್ಟದ ವಿಮರ್ಶಾತ್ಮಕ ಸಾಮರ್ಥ್ಯವುಳ್ಳ ಸಾರ್ವಜನಿಕರ ವಿಚಕ್ಷಣೆಯ ಪರಿಧಿಯಲ್ಲಿ ನಾಗರಿಕತ್ವವೊಂದು ಬೆಳೆಯಲು ಜಾಗತೀಕರಣವು ಸಹಾಯಮಾಡುತ್ತದೆ. ಆದರೆ ಜಾಗತೀಕರಣದಿಂದ ತೀರ ಅಪಾಯಕ್ಕೀಡಾಗಿರುವ ಸಮಾಜಗಳಲ್ಲಿ ಸಂಘಟಿತ ನಾಗರಿಕರ ಶಕ್ತಿಯು ವೃದ್ಧಿಸದಿದ್ದಲ್ಲಿ, ಈ ನಾಗರಿಕತ್ವದ ಅನುಕೂಲ ಅವರಿಗೆ ದಕ್ಕುವ ಬದಲು ಅದರಿಂದ ತೊಂದರೆಯೇ ಆಗಬಹುದು.

ಒಂದು ರಾಷ್ಟ್ರೀಯ ಸಮುದಾಯದ ಒಳಗೇ ಇರುವ ಕ್ರಿಯಾಶೀಲ ನಾಗರಿಕತ್ವದ ಮೇಲೆ ಈ ವಿಶ್ಲೇಷಣೆಗಳ ಪರಿಣಾಮಗಳೇನು? ಜಾಗತೀಕರಣವು ಅನಿವಾರ್ಯವಾಗಿ ಸಮ್ಮಿಳಿತ ಹಾಗೂ ಕಾಸ್ಮೋಪಾಲಿಟನ್ ಪ್ರಜಾಸತ್ತಾತ್ಮಕ ನಾಗರಿಕತ್ವವನ್ನು ಪೋಷಿಸುತ್ತದೆ ಎಂದು ಭವಿಷ್ಯ ನುಡಿಯುವುದು ಆತುರದ ತೀರ್ಮಾನವಾಗಬಹುದು. ಅಷ್ಟೇ ಏಕೆ, ಕೇವಲ ಪ್ರಾದೇಶಿಕ ಪ್ರಭುತ್ವದ ನೆಲೆಯಲ್ಲಿ ರೂಪುಗೊಂಡ ಪ್ರಜಾಸತ್ತಾತ್ಮಕ ನಾಗರಿಕತ್ವದ ಪರಿಕಲ್ಪನೆಯ ವಿರುದ್ಧ ಅತಾರ್ಕಿಕ ಆಕ್ರಮಣಶೀಲ ವಾದವನ್ನು ಮುಂದಿಡುವ ರಾಷ್ಟ್ರೀಯ ಐಡೆಂಟಿಟಿಯ ಅಂತಸ್ಸತ್ವದ ಬಗ್ಗೆ ಕಳವಳಕ್ಕಿಂತಲೂ ಹೆಚ್ಚಾಗಿ ಆಧಾರಗಳಿವೆ. ಜಾಗತೀಕರಣದ ಸ್ಥಿತಿಯಲ್ಲಿ ರಾಷ್ಟ್ರೀಯ ಚಹರೆಯನ್ನಷ್ಟೇ ಹೊಂದಿರುವ ನಾಗರಿಕರು ಕ್ರಿಯಾಶೀಲ ನಾಗರಿಕತ್ವದ ಹೊರತಾಗಿಯೂ ತಮ್ಮ ಸಂದರ್ಭವನ್ನು ಪ್ರಭಾವಿಸಬಲ್ಲ ಶಕ್ತಿಗಳೊಂದಿಗೆ ಕೈ ಜೋಡಿಸಲು ವಿಫಲವಾಗಬಹುದು. ಜಾಗತೀಕರಣಗೊಂಡ ವಿಶ್ವದಲ್ಲಿ, ಪ್ರಜೆಯನ್ನು ಏಕ ರಾಷ್ಟ್ರೀಯ ಸದಸ್ಯನೆಂಬಂತೆ ಗ್ರಹಿಸುವುದು ಪೌರತ್ವದ ಸೀಮಿತ ಪರಿಕಲ್ಪನೆಯೇ ಹೌದು.

'ಯುರೋಪಿಯನ್ ಪೌರತ್ವ' ಎಂಬ ಪರಿಕಲ್ಪನೆಯು, ನಾಗರಿಕನ ಐಡೆಂಟಿಟಿಯಲ್ಲಿ ಕೇಂದ್ರೀಕೃತಗೊಂಡ 'ಏಕೈಕ ರಾಷ್ಟ್ರೀಯ ಐಡೆಂಟಿಟಿ'ಯನ್ನು ಕುರಿತ ಅಭಿಪ್ರಾಯವನ್ನು ಮರುಪರಿಶೀಲನೆಗೊಡ್ಡಿದೆ. "ಯುರೋಪಿಯನ್ ಸಮುದಾಯವು, ಒತ್ತಾಗಿ ಹೆಣೆದುಕೊಂಡ ರಾಜಕೀಯ ಒಕ್ಕೂಟವಾಗಿ ಮಾರ್ಪಡುತ್ತಿದ್ದು, ಪಾರಂಪರಿಕ ರಾಷ್ಟ್ರಪ್ರಭುತ್ವದ ಸ್ವರೂಪವು ಶಿಥಿಲಗೊಳ್ಳುತ್ತಿದೆ" ಎಂದು ಹಾಬರ್‌ಮಾಸ್ (1996) ಅಭಿಪ್ರಾಯಪಡುತ್ತಾರೆ. ರಾಷ್ಟ್ರೋತ್ತರ ಐಡೆಂಟಿಟಿಯೊಂದು ಹೊರಹೊಮ್ಮುವ ಬಗ್ಗೆ ಅವರು ಹೇಳುತ್ತಾ, "ಅದರ ಸ್ಥಾನದಲ್ಲಿ ಸಾಂವಿಧಾನಿಕ ರಾಷ್ಟ್ರಪ್ರೇಮವನ್ನು ಪರ್ಯಾಯ ಸಾಧ್ಯತೆಯಾಗಿ ಮುಂದಿಡುತ್ತಾರೆ (1992, 1996). ಈ ರಾಜಕೀಯ ಒಕ್ಕೂಟದ ಸ್ವರೂಪವು, ಒಂದು ಸಂವಿಧಾನ ಅಥವ ರಾಜಕೀಯ ವ್ಯವಸ್ಥೆಯ ಬಗ್ಗೆ ಭಾಗೀದಾರಿ ಬದ್ಧತೆಯನ್ನು ಹೊಂದಿರುತ್ತದೆ. ಬೆಳೆಯುತ್ತಿರುವ ರಾಜಕೀಯ ಸಂಸ್ಕೃತಿಯೊಂದು ತನ್ನ ಸದಸ್ಯ ರಾಷ್ಟ್ರಗಳ ರಾಷ್ಟ್ರೀಯ ಪರಂಪರೆಗಳಿಗಿಂತ ಭಿನ್ನವಾಗಿ ಗುರುತಿಸಿಕೊಳ್ಳುವ ಪ್ರಕ್ರಿಯೆ ಇದು. ಇದೇ ಸಂದರ್ಭದಲ್ಲಿ ಹಾಬರ್‌ಮಾಸ್ (1996) ಸಿರಿವಂತಿಕೆಯ ಅಂಧಪ್ರೇಮದ ಬಗ್ಗೆಯೂ ಆತಂಕ ವ್ಯಕ್ತಪಡಿಸುತ್ತಾರೆ. ಯುರೋಪು, ಒಂದು ಕೋಟೆಯೋಪಾದಿಯಲ್ಲಿ ತನ್ನ ನಾಗರಿಕರ ವಿಸ್ತೃತ ಸದಸ್ಯತ್ವವನ್ನು ಹೊಂದಿದೆಯಾದರೂ, ಪೂರ್ವ ಮತ್ತು ದಕ್ಷಿಣದಿಂದ ವಲಸೆ ಬರಲಿಚ್ಛಿಸುವವರನ್ನು ಹೊರಗಿಟ್ಟಿದೆ. ಇನ್ನೂ ಸರಿಯಾದ ವಿಶ್ಲೇಷಣೆಯೆಂದರೆ; ಸ್ಥಳೀಯ, ರಾಷ್ಟ್ರೀಯ ಮತ್ತು ರಾಷ್ಟ್ರಾತೀತವಾದ ಐಡೆಂಟಿಟಿಯನ್ನು (ಉದಾ: ನೋಡಿ: ಡಿಲಾಂಟಿ, 1997, ಪು. 299) ಬಿಂಬಿಸುವ ರಾಷ್ಟ್ರೀಯ ನಾಗರಿಕತ್ವಗಳ ವರ್ಗದೊಂದಿಗೆ ಈ ಯುರೋಪಿಯನ್ ನಾಗರಿಕತ್ವವೂ ಬೆಳೆಯಬಹುದಾದರೂ, ಗರಿಷ್ಠ ಯುರೋಪಿಯನ್ ನಾಗರಿಕ ಚಹರೆ ಎಂಬುದು ಅಸಂಭವ ಮತ್ತು ನಾಗರಿಕತ್ವ ಶಿಕ್ಷಣದ ಧ್ಯೇಯವಾಗಿ ಅವಾಸ್ತವಿಕ.

## ಸ್ತ್ರೀವಾದೀ ಸಿದ್ಧಾಂತ ಮತ್ತು ಕ್ರಿಯಾಶೀಲ ನಾಗರಿಕತ್ವ

ಸ್ತ್ರೀವಾದಿ ಸಿದ್ಧಾಂತದ ಪರಿಶೀಲನೆಯು, ಕನಿಷ್ಠ ನಾಗರಿಕತ್ವದ ಬದಲು ಗರಿಷ್ಠ ನಾಗರಿಕತ್ವವು ಅಪೇಕ್ಷಣೀಯ ಎಂಬ ನಿಲುವನ್ನು ಪುನರ್‌ಪರಿಶೀಲಿಸುವಂತೆ ಪ್ರೇರೇಪಿಸುತ್ತದೆ. ಸ್ತ್ರೀವಾದಿ ಸಿದ್ಧಾಂತವು, ಗರಿಷ್ಠ ಮತ್ತು ಕನಿಷ್ಠ ಪೌರತ್ವದ ನಡುವಿನ ಭಾಗೀದಾರಿ, ಕ್ರಿಯಾಶೀಲ ಹಾಗೂ ಗರಿಷ್ಠ ನಾಗರಿಕತ್ವದ ಪರಿಕಲ್ಪನೆಯನ್ನು ಬೆಂಬಲಿಸುವಂತಿದೆ (ಉದಾ: ಅರ್ನಾಟ್, 1997, ಪು. 289). ಸ್ತ್ರೀಯರನ್ನು ಮತದಾನದ ಹಕ್ಕಿನಿಂದ ಹೊರಪಡಿಸುವಿಕೆ, ಅರ್ಹತೆಯಿಂದ ಹಿಡಿದು ಚುನಾವಣೆಗೆ ನಿಲ್ಲುವವರೆಗೆ ಅವರಿಗೆ ವಿಧಿಸಲ್ಪಟ್ಟ ನಿರ್ಬಂಧಗಳು, ಪುರುಷರೊಂದಿಗೆ ಸಮಾನ ನೆಲೆಯಲ್ಲಿ ಉದ್ಯೋಗ ಪಡೆಯುವಲ್ಲಿನ ಅಡೆತಡೆಗಳು ಹಾಗೂ ಕೆಲವು ರಾಷ್ಟ್ರಗಳಲ್ಲಿ, ಗಂಡಸರು ಜೊತೆಗಿಲ್ಲದೇ ಓಡಾಡಬಾರದು ಎಂಬ ನಿರ್ಬಂಧ – ಮುಂತಾದ ಮಹಿಳೆಯರನ್ನು ಹೊರಗಿಟ್ಟ ಸ್ಥಿತಿಯನ್ನು ಗಮನಿಸಿದರೆ; ಭಾಗೀದಾರಿ ನಾಗರಿಕತ್ವವು ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಸ್ತ್ರೀಯರಿಗೂ ಅವಕಾಶಗಳನ್ನು ಒದಗಿಸಬಹುದಾದ ಕಾರಣ, ಹೆಚ್ಚು ಮಹತ್ವಪೂರ್ಣವೆಂಬ ಅಂಶವು ಸುಸ್ಪಷ್ಟ.

ಆದರೂ ಕೆಲವು ಸ್ತ್ರೀವಾದಿ ಬರಹಗಾರರು ಈ ನಾಗರಿಕತ್ವದ ಪರಿಕಲ್ಪನೆಯ ಉಪಯುಕ್ತತೆಯ ಬಗ್ಗೆ ತಮ್ಮ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ಉದಾಹರಣೆಗೆ, ಪ್ಯಾಟ್‌ಮನ್ ಇದನ್ನು, "ಪುರುಷ ಬಿಂಬದಲ್ಲಿ ಸೃಷ್ಟಿಸಿದ್ದು" ಎಂದು ಆರೋಪಿಸುತ್ತಾರೆ (1989 ಪು. 14). ಜೋನ್ಸ್ ಪ್ರಕಾರ (1990 ಪು. 811) ನಾಗರಿಕತ್ವದ ಪರಿಕಲ್ಪನೆಯನ್ನು ಪುನರ್ರೂಪಿಸಿ ಅದು ಹೊಸತಾಗಿ ನಿರ್ವಚಿಸುವ ರಾಜಕೀಯ ಚೌಕಟ್ಟು ಮಹಿಳೆ ಮತ್ತು ಆಕೆಯ ಅನುಭವಗಳಿಗೆ ಸ್ನೇಹಶೀಲವಾಗಿ ಇರುತ್ತದೆಯೇ ಎಂಬ ಪ್ರಶ್ನೆ ಇನ್ನೂ ಮುಕ್ತವಾಗಿದೆ. ಖಾಸಗಿ, ಕೌಟುಂಬಿಕ ಚೌಕಟ್ಟಿನ ಕಾಳಜಿಗಳಿಂದಾಚೆ ಹೆಚ್ಚು ಮೌಲಿಕವಾಗಿ ಪರಿಗಣಿಸಬೇಕಾದ ಸಾರ್ವಜನಿಕ ಭಾಗವಹಿಸುವಿಕೆಯೇ ನಾಗರಿಕತ್ವ ಎಂಬ ಗಣತಾಂತ್ರಿಕ ಗ್ರಹಿಕೆಯನ್ನು ಗಮನಿಸುತ್ತಾ, ಓಕಿನ್ (1992) ಅವರು, ಮಹಿಳೆಯರು ನಾಗರಿಕತ್ವದ ಹಕ್ಕು ಮತ್ತು ಭಾಗೀದಾರಿ ಆದರ್ಶವನ್ನು ಪಡೆಯಬೇಕು; ಆದರೆ ಈ ಪಾರಂಪರಿಕ ಆದರ್ಶವನ್ನು ಪುನರ್ರೂಪಿಸಿ (ಇತರೇ ರಾಜಕೀಯ ಪರಿಕಲ್ಪನೆಗಳ ಜೊತೆ) ಮಹಿಳೆಯರನ್ನು ಹೊರಪಡಿಸುವುದಕ್ಕೆ ಬದಲಾಗಿ ಅವರನ್ನೂ ಒಳಗೊಳ್ಳುವಂತೆ ಮಾಡಬೇಕಿದೆ ಎಂದು ಅಭಿಪ್ರಾಯಪಡುತ್ತಾರೆ. ಈ ಪುನರ್ರೂಪಿಸಿದ ನಾಗರಿಕತ್ವದ ಪರಿಕಲ್ಪನೆ ಪುರುಷರಿಗೂ ಅನುಕೂಲಕರ ಪರಿಕಲ್ಪನೆಯನ್ನು ಕಟ್ಟಿಕೊಡುತ್ತದೆ ಎಂದು ಆಕೆ ಪರಿಗಣಿಸುತ್ತಾರೆ. ಇದೇ ರೀತಿ ಸ್ಥಳೀಯ ಚೌಕಟ್ಟಿನ ಸಾಮಾಜಿಕ ಬದಲಾವಣೆಗಳೂ ಪ್ರಜಾಸತ್ತಾತ್ಮಕ ನಾಗರಿಕತ್ವವನ್ನು ಗಟ್ಟಿಗೊಳಿಸುತ್ತವೆ. ಪುರುಷಕೇಂದ್ರಿತ ರಾಜನೀತಿ ಮತ್ತು ರಾಜಕೀಯ ಸಿದ್ಧಾಂತಗಳ ಕುರಿತಾಗಿ ಸ್ತ್ರೀವಾದವು ಗಮನಾರ್ಹ ಹಾಗೂ ವಿಮರ್ಶಾತ್ಮಕ ವ್ಯಾಖ್ಯೆಗಳ ಕೊಡುಗೆ ನೀಡುವುದರ ಜೊತೆಗೆ ಖಾಸಗಿತನದ ಪ್ರಾಮುಖ್ಯತೆಯನ್ನು ಕುರಿತಂತೆಯೂ ನಮ್ಮ ಗಮನವನ್ನು ಸೆಳೆದಿದೆ. ಭಾಗೀದಾರೀ ನಾಗರಿಕತ್ವದ ಕಾಣ್ಕೆಗೆ (ಸ್ತ್ರೀ ವಾದಿ ಇರಲಿ, ಇತರರಿರಲಿ) ನಾಗರಿಕತ್ವದ ಸಿದ್ಧಾಂತಿಗಳು ನೀಡುವ ಬೆಂಬಲ ಏನೇ ಇದ್ದರೂ, ಬಹುಪಾಲು ಮಹಿಳೆಯರ ಬದುಕಿನ ವಾಸ್ತವವೆಂದರೆ; ಅವರ ಬಹಳಷ್ಟು ಚಟುವಟಿಕೆಗಳನ್ನು ಖಾಸಗಿ/ವೈಯಕ್ತಿಕ ಬದುಕಿಗೆ ನಿರ್ಬಂಧಿಸಲಾಗಿದೆ. ಈ ಜವಾಬ್ದಾರಿಯು ಅಸಮತೋಲಿತವೂ ಹೌದು. ಮಕ್ಕಳ ಯೋಗಕ್ಷೇಮ, ಹಿರಿಯರ ಹಾಗೂ ರೋಗಿಗಳ ದೇಖ ರೇಖೆ, ಮನೆಗೆಲಸ ಇತ್ಯಾದಿ ಕೆಲಸಗಳ ಹೊರೆ, ಸಾರ್ವಜನಿಕ ಕ್ಷೇತ್ರಗಳಲ್ಲಿನ ಅವರ ಭಾಗವಹಿಸುವಿಕೆಯ ಅವಕಾಶಗಳನ್ನು ಕುಂಠಿತಗೊಳಿಸಿದೆ.

ಸಾರ್ವಜನಿಕ ಕ್ಷೇತ್ರದಲ್ಲಿ ಪೌರನು ಕ್ರಿಯಾಶೀಲನಾಗಿರಬೇಕೆಂಬುದರ ಬಗ್ಗೆ ಹೆಚ್ಚಿನ ಲಕ್ಷ್ಯವನ್ನು ನೀಡಲಾಗಿದ್ದು, ಇದು, ಪಾರಂಪರಿಕ ನಾಗರಿಕತ್ವ ಪರಿಕಲ್ಪನೆಗಳ ಪ್ರಮುಖ ದೋಷವೂ ಹೌದು. ಹೀಗೆ ಒತ್ತು ನೀಡುವುದರಲ್ಲಿನ ಅಪಾಯವೆಂದರೆ, ಗೃಹಕೃತ್ಯದ ಕೆಲಸಗಳಾವುವೂ ನಾಗರಿಕರಾಗಿ ಮಾಡುವ ಕೆಲಸ ಹಾಗೂ ಕರ್ತವ್ಯಗಳ ಭಾಗವಲ್ಲ ಎಂಬ ಗ್ರಹಿಕೆ. ಗೃಹಕೃತ್ಯಗಳು ಸಂಪೂರ್ಣ ಕ್ರಿಯಾಶೀಲತೆಯಿಂದ ಕೂಡಿದ್ದಾಗ್ಯೂ, ವೈಯಕ್ತಿಕ ಬದುಕಿನ ಸಂತಾನೋತ್ಪತ್ತಿ ಹಾಗೂ ಅವಲಂಬಿತರ ಯೋಗಕ್ಷೇಮದ ಕಾಳಜಿಗಳೂ ಸಹ ಸಾರ್ವಜನಿಕ ಕ್ಷೇತ್ರದಲ್ಲಿನ ಭಾಗವಹಿಸುವಿಕೆಯಷ್ಟೇ ಕ್ರಿಯಾಶೀಲ ಎಂಬ ಮಟ್ಟಕ್ಕೆ ಗ್ರಹಿಕೆಯು ಬೆಳೆದಿಲ್ಲ. ಮನೆಯಲ್ಲಿನ  ನಮ್ಮ ನಾಗರಿಕತ್ವದ ಪಾತ್ರವನ್ನು ಅರ್ಥೈಸುವುದು; ಅದರ ಕನಿಷ್ಠ ಮಟ್ಟದಲ್ಲಷ್ಟೇ.

ಆದರೆ ನಾಗರಿಕತ್ವವನ್ನು ಕುರಿತ ಸ್ತ್ರೀವಾದಿ ವಿಮರ್ಶಾತ್ಮಕ ವ್ಯಾಖ್ಯೆಗಳು; ನಾಗರಿಕತ್ವವನ್ನು ಕನಿಷ್ಠ ಮತ್ತು ಖಾಸಗಿ ಎಂಬ ಗ್ರಹಿಕೆಗೆ ಬದಲಾಗಿ, ಗರಿಷ್ಠ ಮತ್ತು ಸಾರ್ವಜನಿಕವೆಂಬ ಗ್ರಹಿಕೆಯಲ್ಲಿ ಪುನರ್ರಚಿಸಬೇಕೆಂದು ಸಲಹೆಯಿತ್ತಿವೆ. ಯಾವುದೇ ವ್ಯಕ್ತಿಯ ಖಾಸಗಿತನದ ಮೇಲೆ ಲಕ್ಷ್ಯವನ್ನು ಕೇಂದ್ರೀಕರಿಸುವುದೆಂದರೆ ಅದು, ನಾಗರಿಕತ್ವದ ಕನಿಷ್ಠ ಸ್ವರೂಪವಲ್ಲ; ಅಂತೆಯೇ, ಸಾರ್ವಜನಿಕ ವ್ಯವಹಾರಗಳಲ್ಲಿನ ಆಸಕ್ತಿಯ  ನಿರಾಕರಣೆಯೂ ಅಲ್ಲ. ಏಕಾಂಗಿ ಬಡಮಹಿಳೆಯರು ಮನೆಗೆ ಕಟ್ಟುಬೀಳುವ ಸಂದರ್ಭಗಳನ್ನು ಪ್ರಭುತ್ವವು ಗುರುತಿಸುವ ಮೂಲಕ ಅವರಿಗೆ ಕಲ್ಯಾಣ ಕಾರ್ಯಕ್ರಮಗಳ ಹಕ್ಕನ್ನು ಜಾರಿಗೊಳಿಸುವ ಗರಿಷ್ಠ ಮಟ್ಟದ ಬದ್ಧತೆಯನ್ನು ತೋರುವಂತೆ ಪ್ರತಿಪಾದಿಸಬಹುದು. ಮಕ್ಕಳನ್ನು ನೋಡಿಕೊಳ್ಳಲು ಸರ್ಕಾರಿ ನಿಧಿಯನ್ನು ಬಳಸಿ, ಶಿಶು ಪಾಲನಾ ಗೃಹಗಳನ್ನು ತೆರೆದಲ್ಲಿ, ತಾಯಂದಿರು ತಮ್ಮ ಜೀವನೋಪಾಯಕ್ಕಾಗಿ ಹಣವನ್ನು ಸಂಪಾದಿಸಲು ಅನುವಾಗುತ್ತದೆ. ಉದ್ಯೋಗ ಕ್ಷೇತ್ರದಲ್ಲಿ ಪುರುಷರೊಂದಿಗೆ ಸಮಾನವಾಗಿ ಸ್ಪರ್ಧಿಸುವ ಅವಕಾಶವನ್ನು ನೀಡಿದಲ್ಲಿ,;  ಮಹಿಳೆಯ ಸಾರ್ವಜನಿಕ ಕ್ಷೇತ್ರದ ಭಾಗವಹಿಸುವಿಕೆಗೆ ಅವಕಾಶವು ಲಭಿಸುತ್ತದೆ. ಇಂತಹ ಉಪಕ್ರಮಗಳ ಮೂಲಕ ಆಕೆಯು ತನ್ನ ಹಕ್ಕುಗಳನ್ನು ಅನುಭವಿಸುವುದನ್ನು ಸಾಧ್ಯವಾಗಿಸಬಹುದು. ಈ ರೀತಿಯ ಹಕ್ಕೊತ್ತಾಯಗಳನ್ನು ಕನಿಷ್ಠ ಕ್ರಿಯಾಶೀಲ ನಾಗರಿಕರ ಲಕ್ಷಣವೆಂದು ವ್ಯಾಖ್ಯಾನಿಸಿದಲ್ಲಿ; ನಾಗರಿಕತ್ವದ ಪರಿಕಲ್ಪನೆಯನ್ನು ಮಹಿಳೆಯರ ಮೇಲೆ ಹೇರಿದಂತೆಯೇ ಹೌದು. ಈ ನಿಟ್ಟಿನ ಸಾಧನೆಗಳೂ ಅವರಿಗೆ ನಿಲುಕದಂಥವು.  ಬಡತನದಲ್ಲೂ ಏಕಾಂಗಿಯಾಗಿ ಮಕ್ಕಳನ್ನು ಪೊರೆವ ಮಹಿಳೆಯರಿಗೆ ಇಂತಹ ಹಕ್ಕುಗಳು ಕ್ರಿಯಾಶೀಲ ನಾಗರಿಕತ್ವದ ಸದವಕಾಶಗಳಿಗಿಂತಲೂ ಹೆಚ್ಚು ಮುಖ್ಯವಷ್ಟೇ ಅಲ್ಲ; ಅದು ಕ್ರಿಯಾಶೀಲ ನಾಗರಿಕತ್ವದ ಸಾಧ್ಯತೆಗಿರುವ ಪೂರ್ವ ಶರತ್ತು. ಗೃಹಕೃತ್ಯಗಳ ಜವಾಬ್ದಾರಿ ಅವರಿಗೆ ಸಹಜ. ಸಾರ್ವಜನಿಕ ಕ್ಷೇತ್ರ ಹಾಗೂ ರಾಜಕೀಯವು  ಪುರುಷರಿಗಷ್ಟೇ ಸೂಕ್ತ ಎಂಬ ಗ್ರಹಿಕೆಗಳು ಮಹಿಳೆಯರ ಭಾಗವಹಿಸುವಿಕೆಗೆ ಒಡ್ಡಲಾದ ಬೆದರಿಕೆಗಳೇ ಹೌದು.

ಈ ತೊಡಕುಗಳನ್ನು ಗುರುತಿಸಿ, ಅವರಿಗೆ ಅವಶ್ಯವಿರುವ ನಾಗರಿಕತ್ವದ ಗ್ರಹಿಕೆಯನ್ನು ಪುನರ್ರಚಿಸಿ, ಸ್ತ್ರೀಯರಿಗೆ ಪ್ರಜಾಸತ್ತಾತ್ಮಕ ಸ್ಥಾನಮಾನವನ್ನು ಒದಗಿಸುವ ನಿಟ್ಟನಲ್ಲಿ ಸ್ತ್ರೀವಾದಿ ಬರಹಗಾರರು ಎರಡು ಪ್ರಸ್ತಾಪಗಳನ್ನು ಮುಂದಿಡುತ್ತಾರೆ:

1. ಮನೆಯೊಳಗಿನ ಸಂಬಂಧಗಳ ಪುನರ್ರಚನೆ
2. ಪ್ರಜಾಸತ್ತೆಯ ಪ್ರಾತಿನಿಧಿಕ ಮತ್ತು ಭಾಗೀದಾರಿ ಮೌಲ್ಯಗಳ ಪುನರವಲೋಕನ

ಕೌಟುಂಬಿಕ ಸಂಬಂಧಗಳನ್ನು ಪುನರ್ರಚಿಸುವುದು ಸಮಾನ ನಾಗರಿಕತ್ವದ ಮೂಲಭೂತ ಅಗತ್ಯ ಎಂದು ಒಕಿನ್ (1992) ಮತ್ತು ಫಿಲಿಪ್ಸ್ (1991) ಪ್ರತಿಪಾದಿಸುತ್ತಾರೆ. ಸಾರ್ವಜನಿಕ ಕ್ಷೇತ್ರ ಮತ್ತು ಖಾಸಗಿ–ಕೌಟುಂಬಿಕ ಕ್ಷೇತ್ರಗಳ ಸಂಬಂಧಗಳಲ್ಲಿನ  ಬದಲಾವಣೆ, ಸಮಾನ ನಾಗರಿಕತ್ವದ ಅವಶ್ಯಕತೆ ಎಂಬುದಾಗಿ ಒಕಿನ್ ವಾದಿಸುತ್ತಾರೆ. "ಮಕ್ಕಳನ್ನು ಹೆತ್ತು, ಅವರ ಪಾಲನೆ ಪೋಷಣೆಗೈದವರ ಮತ್ತು ಸಮಾಜದ ವ್ಯವಸ್ಥೆ ಹಾಗೂ ಅದರ ಅಂತರಾರ್ಥವನ್ನು ನಿಷ್ಕರ್ಷಿಸಿದವರ ನಡುವಿನ ಶ್ರಮ ವಿಭಜನೆಯೇ ರಾಜಕೀಯ ಮತ್ತು ರಾಜಕೀಯ ಸಿದ್ಧಾಂತಕ್ಕೆ ಹೊಣೆ ಎಂಬುದು ಸ್ತ್ರೀವಾದಿಗಳ ಮನಮುಟ್ಟುವ ಪ್ರತಿಪಾದನೆ. (1992 ಪು. 63)

ಆದ್ದರಿಂದ ನಾಗರಿಕತ್ವದ ರೂಪಾಂತರವು; ಕುಟುಂಬಗಳ ಅಸಮಾನ ಸಂಬಂಧಗಳು ಬದಲಾಗಿ, ಅವು ಭವಿಷ್ಯದ ನಾಗರಿಕರು ಪರಸ್ಪರರನ್ನು ಸಮಾನವಾಗಿ ನೋಡುವ ತಾಣಗಳಾಗಬೇಕೆಂದು ಬಯಸುತ್ತದೆ. ಮಹಿಳೆಯರು ಪೂರ್ಣ ನಾಗರಿಕತ್ವವನ್ನು  ಸಾಧಿಸಬೇಕಿದ್ದರೆ; "ಕೌಟುಂಬಿಕ ಜೀವನದ ಜವಾಬ್ದಾರಿಗಳು (ಮಕ್ಕಳು, ವೃದ್ಧರನ್ನು ನೋಡಿಕೊಳ್ಳುವುದು ಇತ್ಯಾದಿ) ಸಹಜವಾಗಿ ಮಹಿಳೆಯದ್ದು ಎಂಬ ಧೋರಣೆಯು ಬದಲಾಗಿ, ಮಹಿಳೆ ಹಾಗೂ ಪುರುಷರಿಬ್ಬರೂ ಈ ಕೆಲಸವನ್ನು ಸಮಾನವಾಗಿ ಹಂಚಿಕೊಳ್ಳುವ ಗ್ರಹಿಕೆ ಹಾಗೂ ನೀತಿಗಳಿಗೆ ಎಡೆಮಾಡಿಕೊಡಬೇಕು" (ಒಕಿನ್ 1992 ಪು.70). ಈ ಕ್ರಿಯಾಶೀಲ ನಾಗರಿಕತ್ವದ ಕಲ್ಪನೆಗೆ ಸಂವಾದಿಯಾಗಿ ಗರಿಷ್ಠ ನಾಗರಿಕತ್ವದ ಪರಿಕಲ್ಪನೆಯು ಸ್ತ್ರೀವಾದಿ ದೃಷ್ಟಿಕೋನದ ಪ್ರಜಾಸತ್ತಾತ್ಮಕ ನಾಗರಿಕತ್ವಕ್ಕೆ ಕೆಲವು ಸಮಸ್ಯೆಗಳನ್ನೊಡ್ಡುತ್ತದೆ. ಗರಿಷ್ಠ–ಕನಿಷ್ಠ ವ್ಯತ್ಯಾಸವನ್ನು ಕುರಿತ ಸ್ತ್ರೀವಾದಿ ವ್ಯಾಖ್ಯೆಯು; ಸಮಾನ ಪ್ರಜಾಸತ್ತಾತ್ಮಕ ನಾಗರಿಕತ್ವಕ್ಕೆ ಸಂಬಂಧಿಸಿದಂತೆ, ಸಕ್ರಿಯ/ನಿಷ್ಕ್ರಿಯ ಮತ್ತು ಸಾರ್ವಜನಿಕ/ಖಾಸಗಿ ಎಂಬ ವಿಭಿನ್ನ ಜೋಡಣೆಗಳ ಮುಂದುವರಿಕೆಯನ್ನು ಮರುಪರಿಶೀಲಿಸುವಂತೆ ಸಲಹೆಯನ್ನಿತ್ತಿದೆ.

**<u>ನಾಗರಿಕತ್ವ ಮತ್ತು ಶಿಕ್ಷಣ</u>**

ಡೋಲಾಯಮಾನ ಸ್ಥಿತಿಯಲ್ಲಿದ್ದ ರಾಜಕೀಯ ತತ್ವಶಾಸ್ತ್ರವು '1970ರಲ್ಲಿ ಮತ್ತೊಮ್ಮೆ ಪುನಶ್ಚೇತನಗೊಂಡಿತು. ರಾವುಲ್(1997) ಹಾಗೂ ನೋಜಿಕ್ (1974) ಅವರ  ಸಾಮಾಜಿಕ ನ್ಯಾಯ ಮತ್ತು ಹಕ್ಕುಗಳ ಕುರಿತಾದ ವಿಸ್ತೃತ ಕೊಡುಗೆಗಳ ಹೊರತಾಗಿಯೂ, ಒಂದು ವಿಷಯವು ಕಾರ್ಯಸೂಚಿಯ ವ್ಯಾಪ್ತಿಗೆ ಬರಲು ವಿಫಲವಾಯಿತು. ಅದು; ಮಕ್ಕಳ ವಿಚಾರ. ಪ್ರಪಂಚವು ಪ್ರೌಢರಿಂದಲೇ ತುಂಬಿದೆ ಎಂದು ರಾಜಕೀಯ ತತ್ವಶಾಸ್ತ್ರ ಭಾವಿಸಿತ್ತು. ಅಷ್ಟೇಕೆ, ಕೆಲವರ ಪ್ರಕಾರ ಪ್ರಪಂಚವು ವಿಚಾರವಾದಿಯಾದ, ಅಭಿವ್ಯಕ್ತಿ ಸಾಮರ್ಥ್ಯ ಹೊಂದಿದ, ಕಟ್ಟಳೆಗಳ ಬಗ್ಗೆ

ತಿಳುವಳಿಕೆಯಿರುವ, ನಿಶ್ಚಿತ ಧ್ಯೇಯ, ಧೋರಣೆ ಹಾಗೂ ಆಯ್ಕೆಗಳನ್ನು ಹೊಂದಿದ ಪ್ರೌಢರಿಂದ ತುಂಬಿದೆ ಎಂಬ ಗ್ರಹಿಕೆಯಿತ್ತು. ಉದಾರವಾದಿ ನಿಲುಮೆಯ ವಿಚಾರಶೀಲ ನಾಗರಿಕರು, ಮುಗ್ಧ ಮಕ್ಕಳ ಮಟ್ಟದಿಂದ ಹೇಗೆ ವಿಕಾಸಗೊಂಡರು ಎಂಬುದನ್ನು ವಿವೇಚಿಸುವ ಇಚ್ಛೆ ಯಾರಿಗೂ ಇರಲಿಲ್ಲ. ಇದು ಕೊಂಚ ವಿಚಿತ್ರವೂ ಹೌದು. ಏಕೆಂದರೆ ಪ್ಲೇಟೋ, ರೂಸ್ಸೋ ಮುಂತಾದ ರಾಜಕೀಯ ತತ್ವಜ್ಞರಿಗೆ ನಾಗರಿಕ ಶಿಕ್ಷಣವು ಪ್ರಮುಖ ವಿಷಯವಾಗಿತ್ತು. ಮೊದಲಿಗೆ ಒಂದು ಅಧ್ಯಾಯವಾಗಿ, (ಉದಾ: ನೋಡಿ: ಅಕರ್‌ಮನ್, 1980; ವಾಲ್‌ಝರ್, 1983) ನಂತರದಲ್ಲಿ ಸಮಗ್ರ ಕೃತಿಗಳಾಗಿ (ಗುಟ್‌ಮನ್, 1987; ಕಾಲನ್, 1997; ಲೆವಿನ್ಸನ್, 1999) ನಾಗರಿಕ ಶಿಕ್ಷಣವು ರಾಜಕೀಯ ತತ್ವಶಾಸ್ತ್ರದ ಕಾರ್ಯಸೂಚಿಯನ್ನು ಪ್ರವೇಶಿಸಿತು.

**ನಾಗರಿಕತ್ವ ಶಿಕ್ಷಣದ ಗುರಿಗಳೇನು**?

ನಾಗರಿಕತ್ವದ ಶಿಕ್ಷಣದ ಪ್ರಶ್ನೆಯನ್ನು ಕುರಿತು ಕಾಳಜಿಯು ಹೆಚ್ಚುತ್ತಿದ್ದರೂ, ಉದಾರವಾದಿ ಪ್ರಜಾಸತ್ತೆಯಲ್ಲಿ ಅದರ ಗುರಿ ಹಾಗೂ ವಿಧಿ, ವಿಧಾನಗಳು ಹೇಗಿರಬೇಕೆಂಬ ಬಗ್ಗೆ ಸರ್ವಾನುಮತವಿನ್ನೂ ಸಾಧ್ಯವಾಗಿಲ್ಲ. ರಾಜಕೀಯ ತತ್ವಶಾಸ್ತ್ರಜ್ಞರು ಈ ಕ್ಷೇತ್ರಕ್ಕೆ ಕಾಲಿಟ್ಟಾಗ; ನಾಗರಿಕತ್ವದ ಶಿಕ್ಷಣದ ಸ್ವರೂಪಗಳ ವಿವರಗಳ ಬಗ್ಗೆ ಗಮನಹರಿಸದೇ, ಮೂಲ ಶಿಕ್ಷಣವನ್ನು ಹೇಗೆ ಸಾಮಾಜಿಕವಾಗಿ ಯುಕ್ತ ರೀತಿಯಲ್ಲಿ ಒದಗಿಸಬಹುದು ಎಂಬಿತ್ಯಾದಿ ಸ್ಥೂಲ ವಿಷಯಗಳ ಬಗ್ಗೆ ತಮ್ಮ ಗಮನವನ್ನು ಕೇಂದ್ರೀಕರಿಸಿದರು. (ನೋಡಿ: ಅಕರ್‌ಮನ್, 1980; ವಾಲ್‌ಝರ್, 1983; ಗುಟ್‌ಮನ್, 1987) ನಾಗರಿಕತ್ವದ ಸ್ವರೂಪನ್ನು ಕುರಿತಂತೆ ನಮ್ಮ ಹಿಂದಿನ ಸಮೀಕ್ಷೆಯನ್ನು ಗಮನಿಸಿದರೆ, ಸರ್ವಾನುಮತ ಅಷ್ಟು ಸುಲಭದಲ್ಲಿ ಸಾಧ್ಯವಾಗದ ಕಾರಣಗಳು ಸ್ಪಷ್ಟವಾಗುತ್ತವೆ.

ವಿಷಯದ ಪ್ರಾರಂಭವು ಸಾಕಷ್ಟು ಆಶಾಜನಕವಾಗಿದ್ದಿತು. ನಾಗರಿಕ ಸಮಾಜದಲ್ಲಿ ಯುವಕರ ಸ್ಥಾನಮಾನವೇನು? ವಯಸ್ಸಾದಂತೆ ಹೇಗೆ ಅದು ಬದಲಾಗುತ್ತದೆ? ಎಂಬುದನ್ನು ತಿಳಿಸುವುದು ನಾಗರಿಕತ್ವ ಶಿಕ್ಷಣದ ಗುರಿ. ಇದು ನಾಗರಿಕತ್ವಕ್ಕೆ ಬೇಕಾದ ಅರ್ಹತೆಗಳು ಮತ್ತು ನಾಗರಿಕರು ಅನುಭವಿಸುವ ಹಕ್ಕುಗಳನ್ನು ಒಳಗೊಂಡಿರುತ್ತದೆ. ಇದನ್ನು ವಿವಾದಾತೀತ ಎಂದು ನಾವು ಕರೆದಾಗ, ಒಬ್ಬನ ಸ್ಥಾನಮಾನ ಮತ್ತು ಹಕ್ಕುಗಳು ಸಹಜವೆಂಬುದಾಗಿ ಗ್ರಹಿಸಿರುತ್ತೇವೆ. ನಾಗರಿಕತ್ವವನ್ನು ಒಳಗೊಳ್ಳುವ ಅಥವಾ ಹೊರಗಿಡುವ ಮಾನದಂಡಗಳು, ನಾಗರಿಕನು ಅನುಭವಿಸುವ ನಾಗರಿಕತ್ವದ ಹಕ್ಕುಗಳ ಲಕ್ಷಣ ಹಾಗೂ ವ್ಯಾಪ್ತಿಯನ್ನು ಕುರಿತಂತೆ ಸಮಸ್ಯೆಗಳು ಉದ್ಭವಿಸುತ್ತವೆ. ಇವೆಲ್ಲವೂ ನಾಗರಿಕತ್ವದ ಶಿಕ್ಷಣದ ಸಂದರ್ಭದಲ್ಲಿನ ಚರ್ಚೆಯ ಸಂಗತಿಗಳು. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಯಾವುದೇ ಸಮಾಜದಲ್ಲಿನ ನಾಗರಿಕತ್ವದ ಬಗ್ಗೆ ವಿಮರ್ಶಾತ್ಮಕ ಸೂಕ್ಷ್ಮ ಪರಿಶೀಲನೆಯ ತರುವಾಯ ರೂಪುಗೊಂಡ ಪರಿಕಲ್ಪನೆಯ ಕುರಿತಂತೆ ಸೂಕ್ತ ತಿಳುವಳಿಕೆಯನ್ನು ನೀಡುವುದೇ ಶಿಕ್ಷಣದ ಗುರಿ.

ಕ್ರಿಯಾಶೀಲ ನಾಗರಿಕತ್ವವನ್ನು ಪ್ರೋತ್ಸಾಹಿಸುವುದು ಒಂದು ಗುರಿಯಾಗಿರಬೇಕೇ ಎಂಬ ಪ್ರಶ್ನೆಯೊಂದಿಗೆ ವಿಷಯವು ಇನ್ನಷ್ಟು ಸಂಕೀರ್ಣವಾಗುತ್ತದೆ. ಇಲ್ಲಿ ತತ್ಸಂಬಂಧಿತ ಎರಡು ವೈರುಧ್ಯಗಳಿವೆ. (1) ಹಕ್ಕುಗಳು ನಿರೀಕ್ಷಿಸುವ ಜವಾಬ್ದಾರಿಗಳಿಗೆ ಸ್ಪಂದಿಸುವ ನಾಗರಿಕರು (ಅಂದರೆ ಮತ ಚಲಾವಣೆ, ವಾರ್ತಾ ಪತ್ರಿಕೆಗಳಿಗೆ ಬರೆಯುವುದು, ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವುದು ಇತ್ಯಾದಿ) ಮತ್ತು ಈ ಬಗ್ಗೆ ನಿಷ್ಕಾಳಜಿಯಿಂದಿದ್ದು ನಿಷ್ಕ್ರಿಯರಾಗಿರುವ ನಾಗರಿಕರು. (2) ಸಾರ್ವಜನಿಕ ಜೀವನದಲ್ಲಿ ಕ್ರಿಯಾಶೀಲವಾಗಿದ್ದು, ತನ್ನ ಖಾಸಗಿ ಕಾಳಜಿಗಳಿಗಿಂತಲೂ ಇದನ್ನೇ ಉನ್ನತವಾದದ್ದೆಂದು ಬಗೆಯುವ ನಾಗರಿಕರು. ಇವರು ಸದರಿ ಹಕ್ಕುಗಳನ್ನು ಹೊಂದಿದವರಾಗಿದ್ದು, ತತ್ಸಂಬಂಧಿತ ಜವಾಬ್ದಾರಿಗಳಿಗೆ ಬದ್ಧರಾಗಿರುತ್ತಾರೆ.

ಕ್ರ. ಸಂ. (1)ರಲ್ಲಿ ತಿಳಿಸಿರುವಂತೆ, ಕ್ರಿಯಾಶೀಲ ನಾಗರಿಕತ್ವವು ಒಂದು ಜಾಗೃತಿಯಾಗಿ ಪ್ರಜಾಸತ್ತಾತ್ಮಕ ಸರ್ಕಾರದ ಮುಂದುವರಿಕೆಯ ರಕ್ಷಣೆಗೆ ಅವಶ್ಯಕ. ಈ ರೀತಿಯ ಪ್ರಜಾಸತ್ತಾತ್ಮಕ ಜಾಗೃತಿಯನ್ನು ಬೆಳೆಸುವುದು ಐಚ್ಛಿಕವಾಗಿರಲು ಸಾಧ್ಯವಿಲ್ಲ. ಆದರೆ ನಾಗರಿಕ ಶಿಕ್ಷಣವು ಕ್ರ. ಸಂ. (2)ರಲ್ಲಿ ತಿಳಿಸಿರುವ ಅಂಶವನ್ನು ಒಂದು ಗುರಿಯಾಗಿ ಇಟ್ಟುಕೊಳ್ಳತಕ್ಕದ್ದೇ? ಹಾಗಿದ್ದರೆ, ಖಾಸಗಿ ಕಾಳಜಿಗಳಿಗಿಂತಲೂ ಇದೇ ದೊಡ್ಡದು ಎಂಬಂತೆ ನಾಗರಿಕ ಜವಾಬ್ದಾರಿಗೆ ಜೀವನದ ಪ್ರತೀ ಘಟ್ಟದಲ್ಲೂ ಆದ್ಯತೆ ನೀಡಬೇಕೇ? ಎಂಬುದು ಸಮಸ್ಯಾತ್ಮಕ ವಿಷಯವಾಗಿದೆ. ಇಲ್ಲಿ ಎರಡು ರೀತಿಯ ಪ್ರಶ್ನೆಗಳು ಉದ್ಭವಿಸುತ್ತವೆ: 1. ಇದು ಉದಾರವಾದಿ ಪ್ರಜಾಸತ್ತೆಯ ಮೂಲದ್ರವ್ಯವಾದ ಬಹುತ್ವದ ಮೌಲ್ಯಕ್ಕೆ ವಿರುದ್ಧವಾಗಿದೆ. ಅಂದರೆ ಅನಿವಾರ್ಯ ಕಾರಣಗಳಿಲ್ಲದಾಗಲೂ, ಎಲ್ಲರೂ ರಾಜಕೀಯ ವಿಷಯಗಳ ಭಾಗವಹಿಸುವಿಕೆಗೆ ಆದ್ಯತೆ ನೀಡಬೇಕೆಂದು ಇದು ಒತ್ತಾಯಿಸುತ್ತದೆ. 2. ಇದು, ಸಾರ್ವಜನಿಕ/ಖಾಸಗಿ ವ್ಯತ್ಯಾಸದ ಬಗ್ಗೆ ದೂರಗಾಮಿ ಪ್ರಶ್ನೆಗಳನ್ನು ಎತ್ತುತ್ತದೆ. ನಾವು ಖಾಸಗಿಯೆಂದು ಪಟ್ಟಿಮಾಡುವ ಎಲ್ಲವೂ ಖಾಸಗಿಯೇ? ಇದು, ಸಾರ್ವಜನಿಕ ಚೌಕಟ್ಟಿನ ಅಳವಿನಿಂದಾಚೆ ಇದೆಯೇ ಅಥವಾ ಅದರಲ್ಲಿರುವ ಕೆಲವನ್ನು, ಉದಾ: ಮಕ್ಕಳನ್ನು ಬೆಳೆಸುವುದು ಇತ್ಯಾದಿಗಳನ್ನು ನಾಗರಿಕತ್ವದ ಭಾಗವಾಗಿ ಪರಿಗಣಿಸಬೇಕೇ? ಇತ್ಯಾದಿ. ಇದಕ್ಕೆ ಸಂಬಂಧಿಸಿದ ಎಲ್ಲರೂ ಸಾರ್ವಜನಿಕ ಕ್ಷೇತ್ರದ ಭಾಗವಹಿಸುವಿಕೆಯನ್ನು ತಮ್ಮ ಅತ್ಯುಚ್ಛ ಆದ್ಯತೆಯಾಗಿ ಪರಿಗಣಿಸಿದಲ್ಲಿ, ಕೌಟುಂಬಿಕ ಬದುಕಿನ ಪುನರ್ರಚನೆ ಹೇಗೆ? ಎಂಬ ಪ್ರಶ್ನೆಯೂ ಎದುರಾಗುತ್ತದೆ.

ನಾಗರಿಕತ್ವದ ಶಿಕ್ಷಣವನ್ನು ನಿಭಾಯಿಸುವ ಬಗೆ ಹೇಗೆ ಎಂಬುದರ ಮೇಲೆ ಇದರ ಉತ್ತರಗಳು ಪ್ರಭಾವಬೀರಬಲ್ಲವು. ಗಣತಾಂತ್ರಿಕ ಪರಂಪರೆಯಲ್ಲಿ ಕ್ರಿಯಾಶೀಲ ಭಾಗೀದಾರಿ ನಾಗರಿಕತ್ವವನ್ನು ಪ್ರೊತ್ಸಾಹಿಸುವ ಶಿಕ್ಷಣವನ್ನು ಕಲ್ಪಿಸಿಕೊಂಡರೆ; ಸಾರ್ವಜನಿಕ ಕ್ಷೇತ್ರದೆಡೆಗಿನ ಅದರ ಆದ್ಯತೆಯಿಂದಾಗಿ, ಅಲ್ಲೂ ಕೊರೆಗಳು ಕಾಣಿಸುತ್ತವೆ. ಹುಡುಗಿಯರಿಗೂ ಸಮಾನ ನಾಗರಿಕತ್ವವನ್ನು ಬೆಂಬಲಿಸುವ ನಿಟ್ಟಿನಲ್ಲಿ ನಾಗರಿಕತ್ವದ ಶಿಕ್ಷಣವನ್ನು ಒದಗಿಸಿದಲ್ಲಿ; ಹುಡುಗ, ಹುಡುಗಿಯರಿಬ್ಬರಿಗೂ ಖಾಸಗಿ ಹಾಗೂ ಸಾರ್ವಜನಿಕ ವಲಯಗಳಲ್ಲಿನ ತಮ್ಮ ಪಾತ್ರದ ಬಗ್ಗೆ ತಿಳಿವನ್ನು ಮೂಡಿಸುವ ಪ್ರೋತ್ಸಾಹಕರ ಬದಲಾವಣೆಗಳಿಗೆ ಕನಿಷ್ಠ ಗಮನವನ್ನಾದರೂ ನೀಡತಕ್ಕದ್ದು. ಖಾಸಗಿ ವಲಯವು ಶೈಕ್ಷಣಿಕ ಅಳವಿನಿಂದಾಚೆಯದ್ದು

ಎಂದು ಭಾವಿಸುವುದು ಸಮಾನ ನಾಗರಿಕತ್ವಕ್ಕೆ ಇರುವ ತೊಡಕನ್ನು ನಿರ್ಲಕ್ಷಿಸಿದಂತೆ. ಹುಡುಗರ ಮಟ್ಟಿಗೆ ಹೇಳುವುದಾದರೆ; ಸಾರ್ವಜನಿಕ ಕ್ಷೇತ್ರ, ಸಂಘ, ಸಂಸ್ಥೆ ಹಾಗೂ ರಾಜಕೀಯ ಭಾಗೀದಾರಿಕೆಯ ಪ್ರಾಮುಖ್ಯತೆಯೆಡೆಗಿನ ಅವರ ಲಕ್ಷ್ಯವನ್ನು ಬೇರೆಡೆಗೆ ತಿರುಗಿಸಿದಂತೆ.

ಪ್ರಜಾಸತ್ತೆಯ ಭಾಗೀದಾರಿ ವಿಧಾನಗಳ ಕುರಿತಾದ ಉತ್ಸಾಹದ ಕಾರಣಕ್ಕೆ; ಪ್ರಾತಿನಿಧ್ಯದ ಪ್ರಾಮುಖ್ಯತೆಯನ್ನು ಮರುಪರಿಶೀಲಿಸಬೇಕೆಂಬ ಸ್ತ್ರೀವಾದಿ ಕರೆಯನ್ನು ನಿರ್ಲಕ್ಷಿಸಲಾಗುತ್ತಿದೆ. ನಾಗರಿಕ ಶಿಕ್ಷಣದ ಪುನರ್‌ಪರಿಶೀಲಿತ ವಿಧಾನಗಳ ಮೇಲೆಯೂ ಇದು ಪರಿಣಾಮ ಬೀರುತ್ತದೆ. ಒಕಿನ್ ಮಹಿಳಾ ಪ್ರಾತಿನಿಧ್ಯವನ್ನು ಸುಧಾರಿಸುವ ಬಗ್ಗೆ ಹೇಳುತ್ತಾರೆ. ಇದನ್ನು ನಿರ್ಲಕ್ಷಿಸಿದರೆ, "ಪ್ರತಿನಿಧಿಗಳು" ಮತ್ತು ಪ್ರತಿನಿಧಿಸುತ್ತೇವೆಂಬ ಇಂಗಿತದ ನಡುವಿನ ಬಿರುಕು ಮುಂದುವರಿಯುತ್ತದೆ (1992, ಪು. 71). ಫಿಲಿಪ್ಸ್ ಅವರು ಲಿಂಗ ಮತ್ತು ಲಿಂಗಧಾರಿತ ಅಸಮಾನತೆಯನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳುವ ಪ್ರಾತಿನಿಧ್ಯದ ವಿಧಾನಗಳನ್ನು ವಿಕಸಿತಗೊಳಿಸುವ ಅಗತ್ಯದ ಬಗ್ಗೆ ಹೇಳುತ್ತಾರೆ. ಇದು ರಾಜಕೀಯ ನಿರ್ಧಾರಗಳು ರೂಪುಗೊಳ್ಳುವ ಕ್ಷೇತ್ರಗಳಲ್ಲಿನ ಲಿಂಗಾಧಾರಿತ ನೂತನ ಅನುಪಾತವನ್ನು ಖಚಿತಪಡಿಸೀತು (1991, ಪು.7).

"ಭಾಗವಹಿಸುವಿಕೆಯನ್ನು ಒತ್ತಾಯಿಸುವ ಪ್ರಕ್ರಿಯೆಯಲ್ಲಿ; ನಾಗರಿಕರು ಜವಾಬ್ದಾರಿಯಿಂದ ಭಾಗವಹಿಸುತ್ತಿದ್ದಾರೆಯೇ? ಅಂದರೆ, ಸಾರ್ವಜನಿಕ ಹಿತಾಸಕ್ತಿಯ ಸ್ಫೂರ್ತಿಯಿಂದ ಭಾಗವಹಿಸುತ್ತಿದ್ದಾರೆಯೇ ಅಥವ ಈ ಭಾಗವಹಿಸುವಿಕೆಗೆ ವೈಯಕ್ತಿಕ ಹಿತಾಸಕ್ತಿ/ಪೂರ್ವಾಗ್ರಹಗಳಿವೆಯೇ ಎಂಬುದನ್ನು ಖಚಿತಪಡಿಸಲಾಗದು" ಎಂದು ಕಿಮ್‌ಲಿಕಾ ಮತ್ತು ನಾರ್ಮನ್ ವಾದಿಸುತ್ತಾರೆ (1994, ಪು. 361). ಭಾಗೀದಾರಿ ಪ್ರಜಾಸತ್ತೆಯಿಂದ ಸಶಕ್ತಗೊಂಡ ನಾಗರಿಕರು ತಮ್ಮ ಶಕ್ತಿಯನ್ನು ಬೇಜವಾಬ್ದಾರಿಯಿಂದ ಬಳಸಬಹುದು; ಅಗತ್ಯಗಳು ಹೆಚ್ಚಿದ್ದರೂ ಅದನ್ನು ಪಡೆಯುವ ಶಕ್ತಿಯಿಲ್ಲದ ಗುಂಪುಗಳನ್ನು ಬಲಿಕೊಟ್ಟು, ತಾವು ಹೆಚ್ಚಿನ ಅನುಕೂಲಗಳನ್ನು ಪಡೆಯುವ ವಿಧಾನಗಳನ್ನು ಬಳಸಬಹುದು". ಈ ದೃಷ್ಟಿಕೋನವನ್ನು ಪ್ಯಾರಿ ಮತ್ತು ಮೋಯ್ಸೆರ್ ಕೂಡಾ ಅನುಮೋದಿಸುತ್ತಾರೆ (1994). ಕೇವಲ ಭಾಗವಹಿಸುವಿಕೆಯ ಮಟ್ಟವನ್ನಷ್ಟೇ ಹೆಚ್ಚಿಸಿದರೆ ಅದು ಅಸಮಾನತೆಯನ್ನೂ ಹೆಚ್ಚಿಸಬಹುದು; ಏಕೆಂದರೆ, ಅನುಕೂಲಸ್ಥರು ತಮ್ಮ ದನಿಯನ್ನು ಹೆಚ್ಚು ಗಟ್ಟಿಯಾಗಿ ಕೇಳಿಸಬಲ್ಲರು. ಇದೇ ರೀತಿ, ಪರಿಣಾಮಕಾರಿ ಭಾಗವಹಿಸುವಿಕೆಗೆ ಅವಶ್ಯವಾದ ಜ್ಞಾನ, ಕೌಶಲ್ಯ ಮತ್ತು ಧೋರಣೆಗಳನ್ನು ಕಲಿಸುವಾಗ, ತತ್ಸಂಬಂಧಿತ ಇತರೆ ಸಾಮಾಜಿಕ ಬದಲಾವಣೆಗಳನ್ನೂ ಸಾಧ್ಯವಾಗಿಸದಿದ್ದಲ್ಲಿ, ಪುರುಷ ಪ್ರಾಧಾನ್ಯತೆಯ ಉಳಿವಿಗಾಗಿ ಯುವಕರು ಸಕ್ರಿಯ ನಾಗರಿಕತ್ವದಲ್ಲಿ ತೊಡಗಲು ಅನುವುಮಾಡಿಕೊಟ್ಟಂತಾಗುತ್ತದೆ.

'ಪ್ರಜಾಸತ್ತೆ'ಯೆಂಬುದು 'ಪ್ರಾತಿನಿಧ್ಯ' ಎಂಬ ಗ್ರಹಿಕೆಯ ಮರುಪರಿಶೀಲನೆ ಮತ್ತು ಅದರೊಂದಿಗೇ ಬರುವ, ಪ್ರಜಾಪ್ರಭುತ್ವದ ವಿಭಿನ್ನ ಭಾಗೀದಾರಿಕೆಯ ಮಿತಿಗಳ ಅರಿವು; ನಾಗರಿಕ ಶಿಕ್ಷಣವನ್ನು ಮರುಪರಿಶೀಲಿಸುವುದರ ಬಗ್ಗೆ ಏನು ಹೇಳುತ್ತದೆ? ನಾಗರಿಕತ್ವಕ್ಕೆ ಅವಶ್ಯವೆಂದು ಪರಿಗಣಿಸಲಾದ ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ ವಿಮರ್ಶಾತ್ಮಕ ಅರಿವು ಮತ್ತು ಪ್ರಶ್ನಿಸುವಿಕೆಯ ಪ್ರಮಾಣ ಎಷ್ಟು ಎಂಬುದು, ಇಲ್ಲಿನ ವೈರುಧ್ಯದ ಪ್ರಮುಖ ಅಂಶಗಳಲ್ಲೊಂದಾಗಿದೆ. "ಗರಿಷ್ಠ"ವೆಂಬ ಪರಿಕಲ್ಪನೆಯು ಪ್ರಜಾಸತ್ತೆಯ ತತ್ವ, ನಿಯಮಾವಳಿಗಳು ಹಾಗೂ ಕಾರ್ಯವಿಧಾನಗಳ ಅರಿವು ನಾಗರಿಕನಿಗೆ ಗಮನಾರ್ಹ ಮಟ್ಟದಲ್ಲಿರಬೇಕೆಂದು ಹೇಳುತ್ತದೆ. ಜೊತೆಗೆ ಇಂತಹ ಉದಾತ್ತ ಕಲ್ಪನೆಯ ಪ್ರಜಾಸತ್ತೆಯ ನಾಗರಿಕತ್ವದಲ್ಲಿ ಭಾಗವಹಿಸುವ ಪ್ರವೃತ್ತಿ ಹಾಗೂ ಸಾಮರ್ಥ್ಯವನ್ನೂ ನಾಗರಿಕನು ಹೊಂದಿರಬೇಕಾಗುತ್ತದೆ (ಮೆಕ್‌ಲಾಫಿನ್ 1992ಎ, ಪು. 237). ಸುಶಿಕ್ಷಿತ ಭಾಗೀದಾರಿಕೆಗೆ ನಾಗರಿಕರು ಹೊಂದಬೇಕಾದ ಸಾಮರ್ಥ್ಯಗಳಿಗೂ ಪ್ರಜಾಸತ್ತೆಯ ಪ್ರಾತಿನಿಧಿಕ ರೂಪಗಳಿಗೂ ಸಾಕಷ್ಟು ಸಾಮ್ಯವಿದೆ. ಕ್ರಿಯಾಶೀಲ ಭಾಗವಹಿಸುವಿಕೆಗೆ ನಾಗರಿಕರಿಗಿರುವ ಅವಕಾಶಗಳಲ್ಲಿನ ಎರಡು ವ್ಯತ್ಯಾಸಗಳನ್ನು ಗುರುತಿಸುತ್ತಾ, ಕ್ರಿಯಾಶೀಲರಾಗಲು ಬಯಸದಿರುವ ಮಂದಿಯೂ ಇರುತ್ತಾರೆ ಎಂಬುದನ್ನೂ ಗಮನಿಸಬೇಕು. ನಾಗರಿಕತ್ವ ಶಿಕ್ಷಣವು; ಭಾಗೀದಾರಿ ಮತ್ತು ಪ್ರಾತಿನಿಧ್ಯ ಪ್ರಕ್ರಿಯೆಗಳೆರಡರಲ್ಲೂ ತೊಡಗಿಸಿಕೊಳ್ಳುವುದನ್ನು ಪ್ರೋತ್ಸಾಹಿಸುವ ತನ್ನ ಜವಾಬ್ದಾರಿಯನ್ನು ನಿರ್ವಹಿಸತಕ್ಕದ್ದು. ಕ್ರಿಯಾಶೀಲ ಭಾಗವಹಿಸುವಿಕೆಯು ವಿರಳವಾಗಿದ್ದಾಗ್ಯೂ, ಉತ್ತಮ ಪ್ರಾತಿನಿಧ್ಯಕ್ಕೆ ನೀಡುವ ಪ್ರೋತ್ಸಾಹವನ್ನು ಪ್ರಜಾಸತ್ತೆಯ ಉನ್ನತೀಕರಣವೆಂಬುದಾಗಿ ಭಾವಿಸತಕ್ಕದ್ದು.

ರಾಜಕೀಯ ಭಾಗವಹಿಸುವಿಕೆ ಉಳಿದ ಚಟುವಟಿಕೆಗಳಿಗಿಂತ ಮೇಲ್ಗೈ ಪಡೆಯುವ ರೀತಿಯಲ್ಲಿ ಜನರ ಇಷ್ಟಾನಿಷ್ಟಗಳನ್ನು ರೂಪಿಸುವುದು ಸಮರ್ಥನೀಯವಲ್ಲವೆಂದಾದರೆ, ಇಷ್ಟಾನಿಷ್ಟಗಳಿಗೆ ರೂಪುಕೊಡುವ ಈ ಪ್ರಕ್ರಿಯೆಯು ಪರಿಗಣನೆಗೆ ಅರ್ಹವಲ್ಲವೆಂದು ಹೇಳಬಹುದೇ? ನಾಗರಿಕ ಸದ್ಗುಣಗಳ ಬಗ್ಗೆ ಏನು ಹೇಳುವುದು? ಅವನ್ನು ವಿದ್ಯಾರ್ಥಿಗಳ ಮುಂದಿಟ್ಟು, ಅವರು ಅದರೆಡೆಗೆ ಆಕರ್ಷಿತರಾದಲ್ಲಿ, ಅದನ್ನು ಅನುಸರಿಸುತ್ತಾರೆಂಬ ಧೋರಣೆಯನ್ನು ತಾಳತಕ್ಕದ್ದೇ? ನಾವು ಈಗಾಗಲೇ ಗಮನಿಸಿದಂತೆ ಇಲ್ಲಿಯೂ ಸಹ ವಿಷಯವು ಸರಳವಾಗಿಲ್ಲ. ನ್ಯಾಯ ಮತ್ತು ಸಹಿಷ್ಣತೆಯಂತಹ ಮೌಲ್ಯಗಳು ಪ್ರಜಾಸತ್ತಾತ್ಮಕ ಬದುಕಿನ ಅಸ್ತಿತ್ವಕ್ಕೆ ಬಲು ಮುಖ್ಯ; ಸಜ್ಜನಿಕೆ ಮುಂತಾದವು ಕೊಂಚ ಅಂಚಿನ ಅಂಶಗಳು. ಉದಾರವಾದಿ ಸಮಾಜವೊಂದರ ಬಹುತೇಕರಲ್ಲಿ ಈ ಗುಣಗಳಿದ್ದರೂ; ಇಂತಹ ಅಂಚಿನ ಮೌಲ್ಯಗಳು ಕುಸಿಯುವುದರಿಂದ ಆತ್ಯಂತಿಕ ಅಪಾಯವೇನೂ ಬಾರದು. ಆದರೆ ನ್ಯಾಯ ಮತ್ತು ಸಹಿಷ್ಣುತೆಯಂತಹ ಮೂಲಭೂತ ಮೌಲ್ಯಗಳಿಲ್ಲದಿದ್ದಲ್ಲಿ, ಉದಾರವಾದಿ ಪ್ರಜಾಸತ್ತಾತ್ಮಕ ಸಮಾಜದ ಅಸ್ತಿತ್ವವು ಸಾಧ್ಯವಾಗದು (ಕಾಲನ್, 1997; ಕೈಮ್ಲಿಕಾ 1999).

ನಾಗರಿಕ ಶಿಕ್ಷಣದ ಗುರಿಗಳು ಪ್ರಜಾಸತ್ತಾತ್ಮಕ ಹಕ್ಕು, ತತ್ವ ಮತ್ತು ಧೋರಣೆಳೆಲ್ಲವನ್ನೂ ಪರಾಮರ್ಶಿಸಿವೆ. ಪ್ರಜಾಸತ್ತೆಯ ಗುರಿಗಳನ್ನುಳ್ಳ ಈ ಯಾವ ಕ್ಷೇತ್ರಗಳ ಮೂಲಕ ಪ್ರಜಾಸತ್ತಾತ್ಮಕ ನಾಗರಿಕ ಶಿಕ್ಷಣವನ್ನು ರೂಪಿಸಬಹುದು ಎಂಬುದನ್ನು ಕೆಲವರು ನಿಷ್ಕರ್ಷಿಸುತ್ತಾರೆ. ಆದರೆ ಸಾಮಾಜಿಕ ಒಗ್ಗಟ್ಟಿಗೆ, ಈ ರಾಜಕೀಯ ತತ್ವ ಮತ್ತು ಹಕ್ಕುಗಳಷ್ಟೇ ಸಾಲದೆಂಬ ಸಲಹೆಯನ್ನು ನೀಡಲಾಗಿದೆ. ಸಾಮಾಜಿಕ ಒಕ್ಕೂಟಕ್ಕೆ ಈ ತತ್ವಗಳಷ್ಟೇ ಅಲ್ಲದೆ, ತಾವೆಲ್ಲರೂ ಸಮುದಾಯದ ಸದಸ್ಯರೆಂಬ ಭಾವವೂ ಅವಶ್ಯ. ಅಂದರೆ, ಸಮಾನ ಐಡೆಂಟಿಟಿಯ ಗ್ರಹಿಕೆಯ ಅಗತ್ಯವಿದೆ.. ಕೆಲವು ದೇಶಗಳಲ್ಲಿ ಜನಾಂಗೀಯ ಅಥವಾ ಧಾರ್ಮಿಕ ಸಂಗತಿಗಳು ಇದನ್ನು ಒದಗಿಸುತ್ತವೆ. ಆದರೆ ಬಹುತ್ವವಿರುವ ಪ್ರಜಾಸತ್ತೆಯಲ್ಲಿ ಇವು ಸಮಾನ ಭಾವದ ಸಂಗತಿಗಳಾಗುವುದಿಲ್ಲ. ಹಾಗಿದ್ದರೆ ಇದನ್ನು ಒದಗಿಸುವ ಸಂಗತಿ ಯಾವುದು? ಅದರ ಅಗತ್ಯವಿದೆಯೇ? ಎಂಬ ಪ್ರಶ್ನೆಯಿದೆ..

ಸಾಮಾನ್ಯ ಐಡೆಂಟಿಟಿಗಳೆಡೆಗಿನ ನಿರ್ಲಕ್ಷ್ಯ ಹಾಗೂ ಬೆಂಬಲಗಳು ನಾಗರಿಕ ಶಿಕ್ಷಣದ ಗುರಿಯಾಗಬೇಕಾದ ಅಗತ್ಯವಿದೆಯೇ? ಹಾಗಿದ್ದರೆ ಧರ್ಮ ಅಥವಾ ಜನಾಂಗೀಯ ಬುನಾದಿಯ ಗೈರು ಹಾಜರಿನಲ್ಲಿ ರಾಷ್ಟ್ರೀಯತೆಯು ಎಷ್ಟರಮಟ್ಟಿಗೆ ಈ ಪಾತ್ರವನ್ನು ನಿರ್ವಹಿಸಬಲ್ಲದು? ಹಾಗೆಯೇ, ಯುರೋಪಿಯನ್ ಒಕ್ಕೂಟದಂತಹದೃಷ್ಟಾಂತದಲ್ಲಿ, ನಾಗರಿಕನ ಇತರ ಪ್ರಜಾಸತ್ತಾತ್ಮಕ ಗುಂಪುಗಳ ಸದಸ್ಯತ್ವದ ಜೊತೆಗೆ ಇದು ಹೊಂದಿಕೆಯಾಗುತ್ತದೆಯೇ? ಕಾಸ್ಮೋಪಾಲಿಟನ್ ನಾಗರಿಕತ್ವದ ಕಲ್ಪನೆಯೊಂದಿಗೆ ಇದಕ್ಕೆ ಸಂಬಂಧವನ್ನು ಕಲ್ಪಿಸಬಹುದೇ? ಎಂಬ ಪ್ರಶ್ನೆಗಳಿವೆ.

ನಾಗರಿಕತ್ವವನ್ನು ಕುರಿತ ಚರ್ಚೆಯ ಸದ್ಯದ ಸ್ಥಿತಿಗತಿಗಳಿಂದಾಗಿ; ಈ ನಾಗರಿಕತ್ವದ ಶಿಕ್ಷಣದ ಗುರಿಗಳಿಗೆ ಪ್ರಸ್ತುತದಲ್ಲಿ ನ್ಯಾಯಸಮ್ಮತವಾಗಿ ಆಜ್ಞಾಪಿಸಬಹುದಾದ ಬೆಂಬಲವೂ ಸಹ ಬದಲಾಗುತ್ತಿದೆ. ಪ್ರಜಾಸತ್ತಾತ್ಮಕ ಉದಾರವಾದಿ ರಾಷ್ಟ್ರದಲ್ಲಿನ ನಾಗರಿಕ ಸ್ಥಾನಮಾನವನ್ನು ಜನರಿಗೆ ಅರ್ಥಮಾಡಿಸಲು; ಪ್ರಜಾಸತ್ತೆಯ ಮೂಲಭೂತ ಸತ್ವಗಳಾದ ನ್ಯಾಯ ಮತ್ತು ಸಹಿಷ್ಣುತೆಗಳನ್ನು ಉತ್ತೇಜಿಸುವ ಹಾಗೂ ಪ್ರಜಾಸತ್ತೆಯ ವಿಚಕ್ಷಣೆಯನ್ನು ಉಳಿಸುವ ನಿಟ್ಟಿನಲ್ಲಿ ಕ್ರಿಯಾಶೀಲ ನಾಗರಿಕರಾಗುವಂತೆ ಅವರನ್ನು ಪ್ರೋತ್ಸಾಹಿಸಬಹುದು. ಈ ಉದ್ದೇಶಗಳಿಗಿಂತಲೂ ಮಿಗಿಲಾಗಿ, ಹೆಚ್ಚು ಸಕ್ರಿಯವಾಗಿ ನಾಗರಿಕತ್ವದಲ್ಲಿ ತೊಡಗಿಸಿಕೊಳ್ಳುವ ಮತ್ತು ವಿಸ್ತೃತ ನಾಗರಿಕ ಸದ್ಗುಣಗಳನ್ನು ಬೆಳೆಸಿಕೊಳ್ಳುವ ಸಾಧ್ಯತೆಗಳ ಆಶೋತ್ತರಗಳನ್ನು ನೀಡಬಹುದಾಗಿದೆ. ಈ ಆಶೋತ್ತರಗಳಿಂದಾಚೆಗೆ ಸಾಮಾಜಿಕ ಐಕ್ಯತೆಯಂತಹ ಒಮ್ಮತಕ್ಕೆ ಬಾರದ ಅಪೇಕ್ಷಿತ ವಿಷಯಗಳನ್ನೊಳಗೊಂಡ ಧ್ಯೇಯಗಳಿವೆ.

**ಗುರಿಗಳ ನೆರವೇರಿಕೆ: ಕಾರ್ಯ ವಿಧಾನಗಳು ಮತ್ತು ಸಂಸ್ಥೆಗಳು**

ಉದಾರವಾದಿ ಪ್ರಜಾಸತ್ತೆಯಲ್ಲಿನ ಎಲ್ಲಾ ಮಕ್ಕಳೂ ಹಾಜರಿರುವ ಏಕೈಕ ತಾಣವೆಂದರೆ, ಶಾಲೆ. ಆದ್ದರಿಂದ ನಾಗರಿಕ ಶಿಕ್ಷಣಕ್ಕೆ ಇದು ಪ್ರಮುಖ ನೆಲೆ. ಶಾಲೆಯು ತೊಡಗಿಸಿಕೊಳ್ಳಬೇಕಾದ ಅಂಶಗಳೇನು?

ಪ್ರಜಾಸತ್ತಾತ್ಮಕ ನಾಗರಿಕತ್ವದ ಸ್ಥಾನಮಾನ ಮತ್ತು ಹಕ್ಕುಗಳ ಬಗ್ಗೆ ಜ್ಞಾನವನ್ನು ಪಡೆಯಲು, ನಾಗರಿಕತ್ವಕ್ಕೆ ಸಂಬಂಧಿಸಿದ ಕೋರ್ಸ್‌ಗಳು ಅಗತ್ಯ. ನಿರ್ದಿಷ್ಟವಾಗಿ ಹಿರಿಯ ವಿದ್ಯಾರ್ಥಿಗಳಿಗೆ ಇದರ ಅವಶ್ಯಕತೆಯಿದೆ. ಇವು ಕೇವಲ ಸರಳೀಕೃತ ಮಾರ್ಗದರ್ಶಿಗಳಾಗದೇ, ನಾಗರಿಕ ಸ್ಥಾನಮಾನದಿಂದ ಹೊರಗಿಡುವ ಸಾಧ್ಯತೆಯಿರುವ ಕಾರಣಗಳನ್ನು ಸಮರ್ಥಿಸುವ ವಿಚಾರಗಳನ್ನು ಸಹ ನಿರ್ವಹಿಸುವುದು ಅಗತ್ಯ..

ಸಮಾಜದ ಇತರ ಸಂಸ್ಥೆಗಳಂತೆ ಶಾಲೆಯೂ ಸಹ ವ್ಯವಸ್ಥಿತ ಹಾಗೂ ಪ್ರಜಾಸತ್ತಾತ್ಮಕ ಮಾರ್ಗದಲ್ಲಿ ನಿರ್ವಹಿಸಲ್ಪಡುತ್ತದೆ ಎಂಬ ನಿರೀಕ್ಷೆ ಇದೆ. ಮಕ್ಕಳ ವಯೋಮಾನ ಎಷ್ಟೇ ಇರಲಿ, ಎಲ್ಲ ಶಾಲೆಗಳ ಪರಂಪರೆಯೂ ಪ್ರಜಾಸತ್ತಾತ್ಮಕ. ಅಲ್ಲಿನ ವ್ಯವಸ್ಥೆಗಳು, ಶಾಲೆಯ ಶಿಕ್ಷಕರು ಮತ್ತು ಮಕ್ಕಳ ಧೋರಣೆ, ಕೆಲಸಗಳನ್ನು ನಿರ್ವಹಿಸುವ ವಿಶಿಷ್ಟ ಕಾರ್ಯವೈಖರಿಗಳು; ಶಾಲೆಯ ಸದಸ್ಯರಲ್ಲಿ ಪ್ರಜಾಸತ್ತಾತ್ಮಕ ಸಮಾಜದಲ್ಲಿ ಬದುಕಲು ಬೇಕಾದ ಗುಣಗಳನ್ನು ಪ್ರೋತ್ಸಾಹಿಸುವ ರೀತಿಯಲ್ಲಿರುತ್ತದೆ. ನ್ಯಾಯ, ಸಹಿಷ್ಣುತೆ, ನಂಬಿಕೆ ಹಾಗೂ ಅಪನಂಬಿಕೆ, ಪ್ರಾಮಾಣಿಕತೆ, ಭರವಸೆ, ಸೌಜನ್ಯತೆ, ಕೃತಜ್ಞತೆ, ನಿಷ್ಠೆ, ಕರುಣೆ ಮುಂತಾದ ನಾಗರಿಕ ಗುಣಗಳನ್ನು ಕಲಿಸುವಂತಹ ಶಿಕ್ಷಣವನ್ನು ಇದು ಒಳಗೊಂಡಿರುತ್ತದೆ. ಈ ಮೊದಲು ತಿಳಿಸಿದ ಮೂಲಭೂತ ಮತ್ತು ಅಂಚಿನ ಮೌಲ್ಯಗಳ ವ್ಯತ್ಯಾಸಗಳ ಬಗ್ಗೆ ಏನೆಂದು ಹೇಳುವುದು? ವಿದ್ಯಾರ್ಥಿಗಳಿಗೆ ಇದನ್ನು ತಿಳಿಯಪಡಿಸುವುದು ಹೇಗೆ? ಇದು ಶಾಲಾಜೀವನದಲ್ಲಿ ವ್ಯಕ್ತಗೊಳ್ಳುವುದೆಂದು ಭಾವಿಸುವುದು ಸಮಂಜಸವೆನಿಸುತ್ತದೆ. ಇದರ ಅರ್ಥ ವಿಕೃತಿಯಾಗಿರುವಲ್ಲಿ, ಪ್ರತ್ಯೇಕವಾಗಿ ಒತ್ತುನೀಡುವ ಮೂಲಕ ಆ ಬಗ್ಗೆ ಗಮನಸೆಳೆಯುವುದು ಅವಶ್ಯ. ಸ್ಪಷ್ಟವಾಗಿ ಹೇಳಬೇಕೆಂದರೆ, ವರ್ಣಬೇಧ ನೀತಿಯ ಕುರಿತಾದ ಕೆಟ್ಟ ನಡವಳಿಕೆಯ ಧೋರಣೆಯು, ಸೌಜನ್ಯರಹಿತ ಕೃತಜ್ಞತೆಯ ಅಭಿವ್ಯಕ್ತಿಗಿಂತಲೂ ಭಿನ್ನ.

ಈ ಶಾಲಾ ಬದುಕಿನ ಕ್ರಿಯಾಶೀಲ ಭಾಗವಹಿಸುವಿಕೆಗೆ ನೀಡಲ್ಪಡುವ ಪ್ರೋತ್ಸಾಹವು; ಪ್ರೌಢ ಸಮಾಜದೊಂದಿಗೆ ಭವಿಷ್ಯದಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳಲು ಬೇಕಾದ ವೈಚಾರಿಕ ಆಯ್ಕೆಯನ್ನು ಬೆಳೆಸಿಕೊಳ್ಳುವತ್ತ ನಮ್ಮನ್ನು ಸಜ್ಜುಗೊಳಿಸುತ್ತದೆ. ಇದರ ಅರಿವನ್ನು ಪಡೆಯಲು ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಪ್ರೋತ್ಸಾಹಿಸಬೇಕು. ತೊಡಗಿಸಿಕೊಳ್ಳುವುದರ ಲಾಭ-ನಷ್ಟ, ಕೆಲವರ ಭಾಗೀದಾರಿಕೆಯ ಹಕ್ಕೊತ್ತಾಯಗಳು ಇತರರ ಮೇಲೆ ಬೀರುವ ಪರಿಣಾಮವೇನು ಎಂಬುದನ್ನು ವಿದ್ಯಾರ್ಥಿಗಳು ಕಲಿಯಬಹುದು. ಲಿಂಗಾಧಾರಿತ ವಿಷಯಗಳಲ್ಲಿನ ತೊಡಗಿಸಿಕೊಳ್ಳುವಿಕೆಯೂ ಪರಿಗಣಿಸಬೇಕಾದ ವಿಷಯವೇ.

ನಾಗರಿಕ ಶಿಕ್ಷಣಕ್ಕೆ ಸಾಮಾನ್ಯ ಶಾಲೆಗಳು ಅವಶ್ಯ ಎಂಬ ಗ್ರಹಿಕೆಯಲ್ಲಿ ನಾವು ಚರ್ಚೆಗಳನ್ನು ನಡೆಸಿದ್ದೇವೆ. ಒಂದು ಸಮುದಾಯದ ಎಲ್ಲರ ಸಹಬಾಳ್ವೆಗೆ ಸಹಾಯಮಾಡುವ ಶಿಕ್ಷಣದ ಬಗ್ಗೆ ನಾವು ಯೋಚಿಸುತ್ತಿದ್ದಲ್ಲಿ, ಈ ಗ್ರಹಿಕೆಯು ಅಸಮಂಜಸವಾದುದಲ್ಲ. ಸಾಮಾನ್ಯ ಶಾಲೆಯು, ಮಗುವಿಗೆ ತನ್ನ ಸರೀಕರ ವಿಭಿನ್ನ ಅಭಿಪ್ರಾಯಗಳನ್ನು ಅರಿಯುವ ಅವಕಾಶವನ್ನು ನೀಡುತ್ತದೆ. ಶಾಲೆಯು, ಇವುಗಳ ಬಗ್ಗೆ ಚರ್ಚಿಸುವ ಒಂದು ತಾಣವೂ ಹೌದು. ಅವಶ್ಯವಿರುವೆಡೆಗಳಲ್ಲಿ, ಈ ಬಗ್ಗೆ ಅರಿವು ಮೂಡಿಸಬಲ್ಲ ವ್ಯಾವಹಾರಿಕ ವ್ಯವಸ್ಥೆಗಳ ಏರ್ಪಾಟಿನ ಕುರಿತಂತೆ ಸಮಾಲೋಚಿಸಬಹುದು. ಈ ಅಭಿಪ್ರಾಯವನ್ನೂ ಪ್ರಶ್ನಿಸಿದ್ದಿದೆ. ಜನಾಂಗೀಯ ಅಥವಾ ಧಾರ್ಮಿಕ ಗುಂಪುಗಳಿಗೆ, ಸಮಾನ ಪಠ್ಯಕ್ರಮದೊಂದಿಗೆ, ಪ್ರತ್ಯೇಕ ಶಾಲೆಯನ್ನು ಸ್ಥಾಪಿಸುವ ಪರಿಹಾರಕ್ಕೆ ವಿರೋಧವಿದೆ. ಇಂತಹ ವ್ಯವಸ್ಥೆಯು, ಸರಕಾರದ ಕುರಿತು ಅರಿವು ಮೂಡಿಸಬಹುದಾದರೂ, ನಮಗಿಂತ ಭಿನ್ನವಾದ ಜನಾಂಗ, ಧರ್ಮ, ಹಾಗೂ ವರ್ಗಗಳಿಗೆ ಸೇರಿದ ಇತರರೊಂದಿಗೆ ಸಹಬಾಳ್ವೆ ನಡೆಸುವ ಅನುಭವವನ್ನು ಕಲಿಸಲಾರದು. ಒಂದು ವೇಳೆ ಇಂತಹ ಶಾಲೆಗಳ ಸ್ಥಾಪನೆಗೆ ಒತ್ತಾಯಪೂರ್ವಕ ಸೂಕ್ತ ಕಾರಣಗಳಿದ್ದಲ್ಲಿ, ಭಾಗಶಃ ಶಿಕ್ಷಣವನ್ನು ಸಾಮೂಹಿಕವಾಗಿಯೂ, ಇನ್ನುಳಿದ ಭಾಗಶಃ ಶಿಕ್ಷಣವನ್ನು ಪ್ರತ್ಯೇಕ ಶಾಲೆಯಗಳಲ್ಲಿಯೂ ಒದಗಿಸುವುದರ ಮೂಲಕ ಅದನ್ನು ಬಗೆಪರಿಹರಿಸಬಹುದು (ಕೈಮ್ಲಿಕಾ, 1999).

ಯಾವ ಪಠ್ಯಕ್ರಮವೂ ವಿವಾದಾತೀತ ಉದ್ದೇಶಗಳನ್ನು ಹೊಂದಿರುವುದಿಲ್ಲ. ನಾಗರಿಕ ಶಿಕ್ಷಣವೂ ಇದಕ್ಕೆ ಹೊರತಲ್ಲ. ಈಗಲೂ ನಾಗರಿಕತ್ವದ ಸ್ವರೂಪ ಹಾಗೂ ಅದರ ಬಹುಪಾಲು ಅಂಶಗಳು ರಾಜಕೀಯ ಮತ್ತು ತಾತ್ವಿಕ ಚರ್ಚೆಯ ಭಾಗಗಳಾಗಿರುವುದೇ ಇದಕ್ಕೆ ಕಾರಣ. ಆದರೆ ಇದು ಸದೃಢ ನಾಗರಿಕತ್ವದ ಶಿಕ್ಷಣವನ್ನು ರೂಪಿಸುವ ನಿಟ್ಟಿನ ತೊಡಕೇನಲ್ಲ. ನಾಗರಿಕತ್ವದ ಸ್ವರೂಪ, ಉತ್ತಮ ನಾಗರಿಕನ ಲಕ್ಷಣಗಳು ಹಾಗೂ ನಾಗರಿಕತ್ವವನ್ನು ಕುರಿತ ಕಾರ್ಯಕ್ರಮಗಳಲ್ಲಿನ ಆವರ್ತಕ ಪ್ರಮುಖ ವಿಷಯಗಳ ಬಗ್ಗೆ ವಿಮರ್ಶಾತ್ಮಕ ಪ್ರಶ್ನೆಗಳನ್ನು ಒಡ್ಡುವುದರ ಮೂಲಕ ಈ ವಿಷಯವನ್ನು ಕುರಿತ ಉದ್ದೇಶಗಳ ನಡುವಿನ ಕರ್ಷಣಗಳನ್ನು (ಆತಂಕ) ಬಿಂಬಿಸುವುದು ಅವಶ್ಯ.

ಮುಂದಿನ ಓದಿಗೆ:

Callan, E. (1997) Creating Citizens: Political Education and Liberal Democracy, Clarendon Press. Gutmann, A. (1987) Democratic Education, Princeton University Press.

Kymlicka, W. and Norman, W. (1994) Return of the citizen: a survey of recent work on citizenship theory, Ethics, 104, pp. 352–81.

White, Patricia (1996) Civic Virtues and Public Schooling: Educating Citizens for a Democratic Society, Teachers College Press.